# ದಾವಣಗೆರೆ ವಿಶ್ವವಿದ್ಯಾನಿಲಯ

ವಿಶ್ವವಿದ್ಯಾನಿಲಯ ಕಾರ್ಯಾಲಯ, ಶಿವಗಂಗೋತ್ರಿ, ದಾವಣಗೆರೆ-577007

ಸ್ವಾತಂತ್ರ್ಯದ ಅಮೃತ ಮಹೋತ್ಸವ

## ಸಿಂಡಿಕೇಟ್ ಅಸಾಮಾನ್ಯ ಸಭೆಯ ನಡಾವಳಿಗಳು

## ದಿನಾಂಕ:25.01.2023

# ದಾವಣಗೆರೆ ವಿಶ್ವವಿದ್ಯಾನಿಲಯ

ವಿಶ್ವವಿದ್ಯಾನಿಲಯ ಕಾರ್ಯಾಲಯ, ಶಿವಗಂಗೋತ್ರಿ, ದಾವಣಗೆರೆ–577007
ದೂರವಾಣಿ ಸಂಖ್ಯೆ: 08192–208029, ಫ್ಯಾಕ್ಸ್ ಸಂಖ್ಯೆ: 08192–208008

ಃ ವಿದ್ಯಾದಾನೇನ ವರ್ಧತೆ, ವಿದ್ಯಾ ವಿನಯೇನ ಶೋಭತೆ, ವಿದ್ಯಯಾ ವಿಂಧತೆ ಅಮಅಮೃತಂ ಃ

ಸಂಖ್ಯೆ:ದಾವಿವಿ/ಪ್ರಾಧಿಕಾರ/ಸಿಂ/290/2022–23 / 4296 ದಿನಾಂಕ:27.01.2023

ಗೆ,
**ಮಾನ್ಯ ಸಿಂಡಿಕೇಟ್ ಸದಸ್ಯರುಗಳಿಗೆ.**

ಮಾನ್ಯರೆ,

**ವಿಷಯ : ದಿನಾಂಕ:25.01.2023 ರಂದು ಜರುಗಿದ ಸಿಂಡಿಕೇಟ್ ಅಸಾಮಾನ್ಯ ಸಭೆಯ ನಡಾವಳಿಗಳು.**

****

ವಿಶ್ವವಿದ್ಯಾನಿಲಯ ಪ್ರಾಧಿಕಾರಗಳ ನಿರ್ವಹಣೆ ಮತ್ತು ವ್ಯವಹಾರಗಳ ಅಧಿನಿಯಮಗಳು ಅಧ್ಯಾಯ – III ರ ಪ್ರಕರಣ 16 (i) ರ ರೀತ್ಯ ದಿನಾಂಕ:25.01.2023 ರಂದು ಜರುಗಿದ ಸಿಂಡಿಕೇಟ್ ಅಸಾಮಾನ್ಯ ಸಭೆಯ ನಡಾವಳಿಗಳನ್ನು ಈ ಮೂಲಕ ತಮಗೆ ಕಳುಹಿಸಲಾಗಿದೆ.

ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಅಧಿನಿಯಮ, 2000 ರಡಿ ರಚಿಸಲಾಗಿರುವ ಪ್ರಾಧಿಕಾರಗಳ ನಿರ್ವಹಣೆ ಮತ್ತು ವ್ಯವಹಾರಗಳ ಅಧಿನಿಯಮಗಳು – ಅಧ್ಯಾಯ–III ರ ಪ್ರಕರಣ 16(i)ರ ರೀತ್ಯ ನಡಾವಳಿ ತಲುಪಿದ ಏಳು ದಿನಗಳೊಳಗಾಗಿ ತಮ್ಮಿಂದ ನಡಾವಳಿಗಳ ದಾಖಲಾತಿಯ ಬಗ್ಗೆ ಯಾವುದೇ ಆಕ್ಷೇಪಣೆ ಬಾರದಿದ್ದಲ್ಲಿ ನಡಾವಳಿಗಳ ದಾಖಲಾತಿಯು ಸರಿಯಾಗಿದೆಯೆಂದು ಭಾವಿಸಲಾಗುವುದು.

ತಮ್ಮ ವಿಶ್ವಾಸಿ,

ಕುಲಸಚಿವರು
ದಾವಣಗೆರೆ ವಿಶ್ವವಿದ್ಯಾನಿಲಯ
ಶಿವಗಂಗೋತ್ರಿ, ದಾವಣಗೆರೆ-577007.

**ಗೆ,**
ಮಾನ್ಯ ಸಿಂಡಿಕೇಟ್ ಸದಸ್ಯರುಗಳಿಗೆ,
**ಪ್ರತಿಗಳು:**

1. ಮಾನ್ಯ ರಾಜ್ಯಪಾಲರ ಕಾರ್ಯದರ್ಶಿಗಳು, ಕರ್ನಾಟಕ ರಾಜ್ಯಪಾಲರ ಸಚಿವಾಲಯ, ರಾಜಭವನ, ಬೆಂಗಳೂರು–560 001.
2. ಸರ್ಕಾರದ ಮುಖ್ಯ ಕಾರ್ಯದರ್ಶಿಗಳು, ಕರ್ನಾಟಕ ಸರ್ಕಾರ, ವಿಧಾನಸೌಧ, ಬೆಂಗಳೂರು– 560 001.
3. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಉನ್ನತ ಶಿಕ್ಷಣ ಇಲಾಖೆ (ವಿಶ್ವವಿದ್ಯಾನಿಲಯಗಳು), ಬಹುಮಹಡಿಗಳ ಕಟ್ಟಡ, ಬೆಂಗಳೂರು
4. ಆಯುಕ್ತರು, ಕಾಲೇಜು ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ, ನೃಪತುಂಗ ರಸ್ತೆ, ಬೆಂಗಳೂರು.
5. ಎಲ್ಲಾ ಸಿಂಡಿಕೇಟ್ ಸದಸ್ಯರುಗಳಿಗೆ, ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ, ದಾವಣಗೆರೆ.
6. ಕುಲಸಚಿವರು (ಪರೀಕ್ಷಾಂಗ), ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ, ದಾವಣಗೆರೆ.
7. ಹಣಕಾಸು ಅಧಿಕಾರಿಗಳು, ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ, ದಾವಣಗೆರೆ.
8. ನಿಕಾಯಗಳ ಡೀನರುಗಳು, ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ, ದಾವಣಗೆರೆ.
9. ಗ್ರಂಥಪಾಲಕರು, ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ, ದಾವಣಗೆರೆ.
10. ಕಾರ್ಯನಿರ್ವಾಹಕ ಇಂಜಿನಿಯರ್, ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ, ದಾವಣಗೆರೆ.
11. ಉಪಕುಲಸಚಿವರು, ಶೈಕ್ಷಣಿಕ/ಮಾಸನಿ/ಅಭಿವೃದ್ಧಿ ವಿಭಾಗ, ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ, ದಾವಣಗೆರೆ.
12. ನಿರ್ದೇಶಕರು, ಸಿ.ಡಿ.ಸಿ/ಐಕ್ಯೂಎಸಿ/ಪಿ.ಎಂ.ಇ./ದೈಹಿಕ ಶಿಕ್ಷಣ, ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ, ದಾವಣಗೆರೆ.
13. ಪ್ರಾಂಶುಪಾಲರು, ವಿಶ್ವವಿದ್ಯಾನಿಲಯ, ದೃಶ್ಯಕಲಾ ಕಾಲೇಜು, ದಾವಣಗೆರೆ–577004
14. ನಿರ್ದೇಶಕರು, ವಿಶ್ವವಿದ್ಯಾನಿಲಯ ಸ್ನಾತಕೋತ್ತರ ಕೇಂದ್ರ, ರಾ.ಹೆ.13, ಗುಡ್ಡದ ರಂಗವ್ವನಹಳ್ಳಿ, ಚಿತ್ರದುರ್ಗ–577502
15. ಸಂಯೋಜನಾಧಿಕಾರಿಗಳು, ವಿಶ್ವವಿದ್ಯಾನಿಲಯದ ಸರ್ಕಾರಿ ಪ್ರಥಮ ದರ್ಜೆ ಘಟಕ ಕಾಲೇಜು, ತುರುವನೂರು, ಚಿತ್ರದುರ್ಗ–577517
16. ಸಂಯೋಜನಾಧಿಕಾರಿಗಳು, ವಿಶ್ವವಿದ್ಯಾನಿಲಯದ ಸರ್ಕಾರಿ ಪ್ರಥಮ ದರ್ಜೆ ಘಟಕ ಕಾಲೇಜು, ಹರಿಯಬ್ಬೆ, ಚಿತ್ರದುರ್ಗ–577546
17. ಆಪ್ತ ಕಾರ್ಯಾಲಯ, ಮಾನ್ಯ ಕುಲಪತಿಗಳು/ಕುಲಸಚಿವರು, ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ, ದಾವಣಗೆರೆ.
18. ಕಛೇರಿ ಪ್ರತಿ.

# ದಾವಣಗೆರೆ ವಿಶ್ವವಿದ್ಯಾನಿಲಯ

ವಿಶ್ವವಿದ್ಯಾನಿಲಯ ಕಾರ್ಯಾಲಯ, ಶಿವಗಂಗೋತ್ರಿ, ದಾವಣಗೆರೆ-577007

## ವಿಶ್ವವಿದ್ಯಾನಿಲಯದಲ್ಲಿ ದಿನಾಂಕ:25.01.2023ರಂದು ಜರುಗಿದ ಸಿಂಡಿಕೇಟ್ ಅಸಾಮಾನ್ಯ ಸಭೆಯ ನಡಾವಳಿಗಳು

**ಸಭೆಯಲ್ಲಿ ಹಾಜರಿದ್ದ ಸದಸ್ಯರು:**

1. ಪ್ರೊ. ಬಿ.ಡಿ ಕುಂಬಾರ., ಮಾನ್ಯ ಕುಲಪತಿಗಳು. : ಅಧ್ಯಕ್ಷರು
2. ಶ್ರೀ ಎಂ.ವಿ.ಮಲ್ಲಿಕಾರ್ಜುನ ಮಾಡಾಳ್, ಮಾನ್ಯ ರಾಜ್ಯಪಾಲರಿಂದ ನಾಮನಿರ್ದೇಶಿತರು : ಸದಸ್ಯರು
3. ಕುಮಾರಿ ಗೀತಾ ಜಿ., ಮಾನ್ಯ ರಾಜ್ಯಪಾಲರಿಂದ ನಾಮನಿರ್ದೇಶಿತರು : ಸದಸ್ಯರು
4. ಪ್ರೊ. ರಾಮಲಿಂಗಪ್ಪ, ಡೀನರು, ವಿಜ್ಞಾನ ನಿಕಾಯ : ಸದಸ್ಯರು
5. ಪ್ರೊ. ರಂಗಪ್ಪ ಕೆ.ಬಿ., ಪ್ರಾಧ್ಯಾಪಕರು : ಸದಸ್ಯರು
6. ಡಾ. ರವಿ ಟಿ.ಎಸ್., ಪ್ರಾಚಾರ್ಯರು : ಸದಸ್ಯರು
7. ಡಾ. ನಾಗರಾಜ ಜಿ.ಯು., ಪ್ರಾಚಾರ್ಯರು : ಸದಸ್ಯರು
8. ಡಾ. ದಾಸಯ್ಯ ಜಿ., ಪ್ರಾಚಾರ್ಯರು : ಸದಸ್ಯರು
9. ಡಾ. ಪ್ರೇಮಾ ಪಿ.ಎಂ., ಪ್ರಾಚಾರ್ಯರು : ಸದಸ್ಯರು
10. ಪ್ರೊ. ಶಿವಶಂಕರ್ ಕೆ., ಕುಲಸಚಿವರು (ಪರೀಕ್ಷಾಂಗ). : ಸದಸ್ಯರು
11. ಪ್ರೊ. ಸರೋಜ ಬಿ.ಬಿ., ಕುಲಸಚಿವರು. : ಸದಸ್ಯ ಕಾರ್ಯದರ್ಶಿ

ನಿಯಮಾನುಸಾರ ಕನಿಷ್ಠ ಅಗತ್ಯ ಸಂಖ್ಯೆ 8ಕ್ಕಿಂತ ಹೆಚ್ಚು ಅಂದರೆ 11 ಜನ ಸದಸ್ಯರುಗಳು ಹಾಜರಿರುವುದನ್ನು ಖಚಿತಪಡಿಸಿಕೊಂಡು ನಿಗದಿತ ಸಮಯಕ್ಕೆ ಸರಿಯಾಗಿ ಸಭೆಯನ್ನು ಪ್ರಾರಂಭಿಸಲಾಯಿತು. ಮೊದಲನೆಯದಾಗಿ ಮಾನ್ಯ ಕುಲಪತಿಗಳು ಸಭೆಯಲ್ಲಿ ಹಾಜರಿದ್ದ ಎಲ್ಲಾ ಸದಸ್ಯರುಗಳಿಗೆ ಸ್ವಾಗತವನ್ನು ಕೋರಿದರು. ನಂತರ ಸಭೆಯ ಕಲಾಪಗಳನ್ನು ಈ ಮುಂದಿನಂತೆ ಪ್ರಾರಂಭಿಸಲಾಯಿತು.

ಕುಲಸಚಿವರು

ಕುಲಪತಿಗಳು
ದಾವಣಗೆರೆ ವಿಶ್ವವಿದ್ಯಾನಿಲಯ

| ಪ್ರಾಧಿಕಾರಗಳ ವಿಭಾಗ | |
|---|---|
| ವಿಷಯ ಸಂಖ್ಯೆ: | ಸಿಂ.01(a)/(01/23) |

**-:ಟಿಪ್ಪಣಿ:-**

**ವಿಷಯ:** ದಿನಾಂಕ:14.11.2022 ರಂದು ಏರ್ಪಡಿಸಲಾಗಿದ್ದ ಸಿಂಡಿಕೇಟ್ ಸಾಮಾನ್ಯ ಸಭಾ ನಡಾವಳಿಗಳ ದೃಢೀಕರಣ.

*****

ದಿನಾಂಕ:14.11.2022 ರಂದು ಏರ್ಪಡಿಸಲಾಗಿದ್ದ ಸಿಂಡಿಕೇಟ್ ಸಾಮಾನ್ಯ ಸಭಾ ನಡಾವಳಿಗಳ ಬಗ್ಗೆ ಯಾವುದೇ ಆಕ್ಷೇಪಣೆಗಳು ಇದುವರೆಗೂ ವಿಶ್ವವಿದ್ಯಾನಿಲಯಕ್ಕೆ ಬಂದಿರುವುದಿಲ್ಲ. ಸದರಿ ಸಭೆಯ ನಡಾವಳಿಗಳನ್ನು ದೃಢೀಕರಿಸುವ ಸಂಬಂಧ ದಿನಾಂಕ:25.01.2023 ರಂದು ಏರ್ಪಡಿಸಲಾಗಿರುವ ಸಿಂಡಿಕೇಟ್ ಅಸಾಮಾನ್ಯ ಸಭೆಯ ದೃಢೀಕರಣಕ್ಕಾಗಿ ಸಲ್ಲಿಸಿದೆ.

**ನಿರ್ಣಯ**

ವಿಶ್ವವಿದ್ಯಾನಿಲಯದಲ್ಲಿ ದಿನಾಂಕ:14.11.2022 ರ ನಡಾವಳಿಗೆ ಸಂಬಂಧಿಸಿದಂತೆ

1. ಪುಟಸಂಖ್ಯೆ:20 – 8/9 ನೇ ಘಟಿಕೋತ್ಸವಕ್ಕೆ ಸಂಬಂಧಿಸಿದ ಹೆಚ್ಚುವರಿ ಬಿಲ್ಲುಗಳು.
2. ಪುಟಸಂಖ್ಯೆ: 34 ಮತ್ತು 35 – ನ್ಯಾಕ್ ಸಮಿತಿ ಬೇಟಿಯಲ್ಲಿ ಖರೀದಿಸಲಾಗಿರುವ ಖರ್ಚುವೆಚ್ಚಗಳ ಬಾಬ್ತುಗಳ ಬಿಲ್ಲುಗಳು.
3. ಪುಟಸಂಖ್ಯೆ:37 – ವಿಶ್ವವಿದ್ಯಾನಿಲಯದ ಕುಲಪತಿಗಳ ಆಯ್ಕೆಗಾಗಿ ಶೋಧನಾ ಸಮಿತಿ ಬಿಲ್ಲುಗಳು.

ದಿನಾಂಕ:14.11.2022 ರ ನಡಾವಳಿಯ ಪುಟ ಸಂಖ್ಯೆ: 37ರಲ್ಲಿ ನಿರ್ಣಯಿಸಲಾದ ಬಗ್ಗೆ ಸುದೀರ್ಘ ಚರ್ಚೆಯನ್ನು ನಡೆಸಲಾಯಿತು. ನಂತರ ನೊಡಲ್ ಅಧಿಕಾರಿಗಳಿಂದ ಪಡೆದ ಸಮಜಾಯಿಷಿಯನ್ನು ಸಭೆಯ ಗಮನಕ್ಕೆ ತರಲಾಯಿತು. ಸದರಿ ಸಮಜಾಯಿಷಿಯನ್ನು ಸಭೆಯು ಪರಿಶೀಲಿಸಿ ನೋಡಲ್ ಅಧಿಕಾರಿಗಳಿಂದ ವಸೂಲಾತಿಗೆ ಕ್ರಮವಹಿಸದಂತೆ ಸಭೆಯು ನಿರ್ಣಯಿಸಿತು.

ಈ ಮೇಲ್ಕಂಡ 3 ವಿಷಯಗಳನ್ನು ಹೊರತುಪಡಿಸಿ ಇನ್ನುಳಿದ ಎಲ್ಲಾ ವಿಷಯಗಳಿಗೆ ಸಭೆಯು ಚರ್ಚಿಸಿ ನಡಾವಳಿಗಳನ್ನು ದೃಢೀಕರಿಸಿತು.

ಮುಂದುವರೆದು, ಮೇಲ್ಕಂಡ 3 ವಿಷಯಗಳಿಗೆ ವಿಚಾರಣಾ ಸಮಿತಿ ನಿರ್ಣಯದಂತೆ ಕ್ರಮವಹಿಸಲು ಸಭೆಯು ನಿರ್ಣಯಿಸಿತು.

ಕುಲಸಚಿವರು

ಕುಲಪತಿಗಳು
ದಾವಣಗೆರೆ ವಿಶ್ವವಿದ್ಯಾನಿಲಯ

| ಪ್ರಾಧಿಕಾರಗಳ ವಿಭಾಗ | |
| --- | --- |
| ವಿಷಯ ಸಂಖ್ಯೆ: | ಸಿಂ.01(b)/(01/23) |

## -:ಟಿಪ್ಪಣಿ:-

**ವಿಷಯ:** ದಿನಾಂಕ:17.12.2022 ರಂದು ಏರ್ಪಡಿಸಲಾಗಿದ್ದ ಸಿಂಡಿಕೇಟ್ ವಿಶೇಷ ಸಭಾ ನಡಾವಳಿಗಳ ದೃಢೀಕರಣ.

*****

ದಿನಾಂಕ:17.12.2022 ರಂದು ಏರ್ಪಡಿಸಲಾಗಿದ್ದ ಸಿಂಡಿಕೇಟ್ ವಿಶೇಷ ಸಭಾ ನಡಾವಳಿಗಳ ಬಗ್ಗೆ ಯಾವುದೇ ಆಕ್ಷೇಪಣೆಗಳು ಇದುವರೆಗೂ ವಿಶ್ವವಿದ್ಯಾನಿಲಯಕ್ಕೆ ಬಂದಿರುವುದಿಲ್ಲ. ಸದರಿ ಸಭೆಯ ನಡಾವಳಿಗಳನ್ನು ದೃಢೀಕರಿಸುವ ಸಂಬಂಧ ದಿನಾಂಕ:25.01.2023 ರಂದು ಏರ್ಪಡಿಸಲಾಗಿರುವ ಸಿಂಡಿಕೇಟ್ ಅಸಾಮಾನ್ಯ ಸಭೆಯ ದೃಢೀಕರಣಕ್ಕಾಗಿ ಸಲ್ಲಿಸಿದೆ.

### ನಿರ್ಣಯ

ವಿಶ್ವವಿದ್ಯಾನಿಲಯದಲ್ಲಿ ದಿನಾಂಕ:17.12.2022 ರಂದು ಏರ್ಪಡಿಸಲಾಗಿದ್ದ ಸಿಂಡಿಕೇಟ್ ವಿಶೇಷ ಸಭಾ ನಡಾವಳಿಗಳನ್ನು ಚರ್ಚೆಗೆ ತೆಗೆದುಕೊಳ್ಳಲಾಯಿತು. ನಂತರ ನಡಾವಳಿಗಳನ್ನು ಸಭೆಯು ದೃಢೀಕರಿಸಿ ಅನುಮೋದಿಸಿತು.

ಕುಲಸಚಿವರು

ಕುಲಪತಿಗಳು
ದಾವಣಗೆರೆ ವಿಶ್ವವಿದ್ಯಾನಿಲಯ

| ಪ್ರಾಧಿಕಾರಗಳ ವಿಭಾಗ | |
|---|---|
| ವಿಷಯ ಸಂಖ್ಯೆ: | ಸಿಂ.01(c)/(01/23) |

-: ಟಿಪ್ಪಣಿ :-

ವಿಷಯಃ ವಿಶ್ವವಿದ್ಯಾನಿಲಯದ ಮಾನ್ಯ ಸಿಂಡಿಕೇಟ್ ಹಾಗೂ ವಿದ್ಯಾವಿಷಯಕ ಪರಿಷತ್ತಿನ ಸದಸ್ಯರುಗಳಿಗೆ ಉಪಸ್ಥಿತ ಭತ್ಯೆ ಹಾಗೂ ಪ್ರಯಾಣ ಭತ್ಯೆಗಳನ್ನು ಪರಿಷ್ಕರಿಸುವ ಕುರಿತು.

**ಪ್ರಸ್ತಾವನೆ:**

ವಿಶ್ವವಿದ್ಯಾನಿಲಯದಲ್ಲಿ ಆರ್ಥಿಕ ಕೊರತೆ ಇರುವುದರಿಂದ ಮಾನ್ಯ ಸಿಂಡಿಕೇಟ್ ಹಾಗೂ ವಿದ್ಯಾವಿಷಯಕ ಪರಿಷತ್ತಿನ ಸದಸ್ಯರುಗಳಿಗೆ ಪ್ರಸ್ತುತ ನೀಡುತ್ತಿರುವ ಉಪಸ್ಥಿತ ಭತ್ಯೆ ಹಾಗೂ ಪ್ರಯಾಣ ಭತ್ಯೆಗಳನ್ನು ಪರಿಷ್ಕರಿಸಬೇಕಾಗಿದೆ. ಆದ್ದರಿಂದ, ಸರ್ಕಾರದಿಂದ ನಾಮನಿರ್ದೇಶನಗೊಂಡ ಮಾನ್ಯ ಸಿಂಡಿಕೇಟ್ ಹಾಗೂ ವಿದ್ಯಾವಿಷಯಕ ಪರಿಷತ್ತಿನ ಸದಸ್ಯರುಗಳಿಗೆ ಹಾಗೂ ಮಾನ್ಯ ಕುಲಪತಿಗಳಿಂದ ನಾಮನಿರ್ದೇಶನಗೊಂಡ ಪ್ರಾಂಶುಪಾಲರುಗಳಿಗೆ ಉಪಸ್ಥಿತ ಭತ್ಯೆ ಹಾಗೂ ಪ್ರಯಾಣ ಭತ್ಯೆಗಳನ್ನು ಪರಿಷ್ಕರಿಸುವ ಸಂಬಂಧ ಸದರಿ ವಿಷಯವನ್ನು ದಿನಾಂಕ:25.01.2023ರ ಸಿಂಡಿಕೇಟ್ ಸಭೆಯ ಅವಗಾಹನೆಗೆ ಹಾಗೂ ಅನುಮೋದನೆಗೆ ಸಲ್ಲಿಸಲಾಗಿದೆ.

**ನಿರ್ಣಯ**

ವಿಶ್ವವಿದ್ಯಾನಿಲಯದ ಮಾನ್ಯ ಸಿಂಡಿಕೇಟ್ ಹಾಗೂ ವಿದ್ಯಾವಿಷಯಕ ಪರಿಷತ್ತಿನ ಸದಸ್ಯರುಗಳಿಗೆ ಉಪಸ್ಥಿತ ಭತ್ಯೆ ಹಾಗೂ ಪ್ರಯಾಣ ಭತ್ಯೆಗಳಿಗೆ ಸಂಬಂಧಿಸಿದಂತೆ ಪ್ರಸ್ತುತ ನೀಡುತ್ತಿರುವ ದರಗಳನ್ನೆ ಮುಂದುವರೆಸಲು ಸುದೀರ್ಘ ಚರ್ಚೆಯ ನಂತರ ಸಭೆಯು ಒಮ್ಮತದಿಂದ ನಿರ್ಣಯಿಸಿ ಅನುಮೋದಿಸಿತು.

ಕುಲಸಚಿವರು

ಕುಲಪತಿಗಳು
ದಾವಣಗೆರೆ ವಿಶ್ವವಿದ್ಯಾನಿಲಯ

| ಪ್ರಾಧಿಕಾರಗಳ ವಿಭಾಗ | |
|---|---|
| ವಿಷಯ ಸಂಖ್ಯೆ: | ಸಿಂ.01(d)/(01/23) |

## -: ಟಿಪ್ಪಣಿ :-

ವಿಷಯಃ USIC ಗೆ ಪ್ರತ್ಯೇಕ ವಾರ್ಷಿಕ ಅಂದಾಜು ಆಯ-ವ್ಯಯಗಳ ಪಟ್ಟಿಯಲ್ಲಿ (Budget head) ಶೀರ್ಷಿಕೆ ಸೃಜನೆ ಮಾಡುವ ಕುರಿತು ಹಾಗೂ ಕಾರ್ಯಗಾರಿ/ಸಲಹಾ ಸಮಿತಿ ನಡಾವಳಿ ಅನುಮೋದನೆ ಕುರಿತು.

**ಪ್ರಸ್ತಾವನೆ:**

ವಿಶ್ವವಿದ್ಯಾನಿಲಯದಲ್ಲಿ USIC ಗೆ ಪ್ರತ್ಯೇಕ ವಾರ್ಷಿಕ ಅಂದಾಜು ಆಯ-ವ್ಯಯಗಳ ಪಟ್ಟಿಯಲ್ಲಿ (Budget head) ಶೀರ್ಷಿಕೆ ಸೃಜನೆ ಮಾಡಬೇಕಾಗಿದೆ. ತತ್ಸಂಬಂಧ, ವಿಶ್ವವಿದ್ಯಾನಿಲಯದ ವೈಜ್ಞಾನಿಕ ಉಪಕರಣ ಕೇಂದ್ರದ ಸಲಹಾ ಮತ್ತು ಕಾರ್ಯಕಾರಿ ಸಮಿತಿ ಸಭೆಯನ್ನು ದಿನಾಂಕ:16.01.2023ರಂದು ಜರುಗಿಸಲಾಗಿತ್ತು. ಸದರಿ ಸಭೆಯಲ್ಲಿ ಚರ್ಚಿಸಿದ ವಿಷಯಗಳ ನಿರ್ಣಯಗಳಿಗೆ ಸಂಬಂಧಿಸಿದ ನಡಾವಳಿಯನ್ನು ವಿಷಯವನ್ನು ದಿನಾಂಕ:25.01.2023ರ ಸಿಂಡಿಕೇಟ್ ಸಭೆಯ ಅವಗಾಹನೆಗೆ ಹಾಗೂ ಅನುಮೋದನೆಗೆ ಸಲ್ಲಿಸಲಾಗಿದೆ.

**ನಿರ್ಣಯ**

ವಿಶ್ವವಿದ್ಯಾನಿಲಯದಲ್ಲಿ USIC ಗೆ ಪ್ರತ್ಯೇಕ ವಾರ್ಷಿಕ ಅಂದಾಜು ಆಯ-ವ್ಯಯಗಳ ಪಟ್ಟಿಯಲ್ಲಿನ (Budget head) ಶೀರ್ಷಿಕೆ ಸೃಜನೆ ಮಾಡಲು ಹಾಗೂ ದಿನಾಂಕ:16.01.2023ರಂದು ಜರುಗಿದ ವಿಶ್ವವಿದ್ಯಾನಿಲಯದ ವೈಜ್ಞಾನಿಕ ಉಪಕರಣ ಕೇಂದ್ರದ ಸಲಹಾ ಮತ್ತು ಕಾರ್ಯಕಾರಿ ಸಮಿತಿ ಸಭೆಯ ನಡಾವಳಿಗಳನ್ನು ಪರಿಶೀಲಿಸಿ ಸಭೆಯು ಒಮ್ಮತದಿಂದ ಅನುಮೋದಿಸಿತು.

ಕುಲಸಚಿವರು

ಕುಲಪತಿಗಳು
ದಾವಣಗೆರೆ ವಿಶ್ವವಿದ್ಯಾನಿಲಯ

| ಪರೀಕ್ಷಾಂಗ ವಿಭಾಗ | |
|---|---|
| ವಿಷಯ ಸಂಖ್ಯೆ: | ಸಿಂ.02(a)/(01/23) |

**-: ಟಿಪ್ಪಣಿ :-**

ವಿಷಯಃ ದಿನಾಂಕ:03.01.2023ರಂದು ಪರೀಕ್ಷಾಂಗ ವಿಭಾಗದಲ್ಲಿ ಜರುಗಿದ ಉಪ ಸಮಿತಿ ಸಭೆಯಲ್ಲಿ ಅನುಮೋದನೆ ಪಡೆದ ಬಿಲ್ಲುಗಳ ನಡಾವಳಿಗಳ ಅನುಮೋದನೆ ಕೋರಿ.

ಪ್ರಸ್ತಾವನೆ:

ವಿಶ್ವವಿದ್ಯಾನಿಲಯದಲ್ಲಿ ಪರೀಕ್ಷಾಂಗ ವಿಭಾಗದ ಬಿಲ್ಲುಗಳಿಗೆ ಸಂಬಂಧಪಟ್ಟಂತೆ, ಒಂದು ಲಕ್ಷಕ್ಕಿಂತ ಹೆಚ್ಚಿಗೆ ಇರುವ ವಿವಿಧ ಸಂಸ್ಥೆಯ ಬಿಲ್ಲುಗಳನ್ನು ಪರಿಶೀಲನೆ ಮಾಡುವ ಸಲುವಾಗಿ ಮಾನ್ಯ ಕುಲಪತಿಗಳಿಂದ ಅನುಮೋದನೆ ಪಡೆದು ಉಪ ಸಮಿತಿ ತಂಡವನ್ನು ರಚಿಸಲಾಗಿತ್ತು. ಈ ಸಂಬಂಧ ಇ-ಟೆಂಡರ್ ನಲ್ಲಿ ಯಶಸ್ವಿಯಾದ ಸಂಸ್ಥೆಗಳ ಬಿಲ್ಲುಗಳನ್ನು ಸಮಿತಿ ಅಧ್ಯಕ್ಷರು ಮತ್ತು ಸದಸ್ಯರು ಈ ಕೆಳಕಂಡ ದಿನಾಂಕದಂದು ಕೂಲಂಕುಷವಾಗಿ ಪರಿಶೀಲನೆ ಮಾಡಿ ಸಂಬಂಧಪಟ್ಟ ಸಂಸ್ಥೆಗಳಿಗೆ ಹಣ ಪಾವತಿ ಮಾಡಬಹುದೆಂದು ಅನುಮೋದನೆ ನೀಡಿರುತ್ತಾರೆ. ಸದರಿ ನಡಾವಳಿಗಳನ್ನು ಸಭೆಗೆ ಮಂಡಿಸಲಾಗಿದೆ.

ಬಿಲ್ಲುಗಳ ವಿವರಗಳು ಈ ಕೆಳಕಂಡಂತಿದೆ

| ಕ್ರ.ಸಂ | ಸಭೆ ನಡೆದ ದಿನಾಂಕ | ಬಿಲ್ಲು ಸಲ್ಲಿಸಿದ ಸಂಸ್ಥೆಯ ಹೆಸರು | ವಿವರ | ಬಿಲ್ಲಿನ ಮೊತ್ತ |
|---|---|---|---|---|
| 01 | 03.01.2023 | ಮೆ:ಲಾಜಿಸಿಸ್ಸ್ , ಬೆಂಗಳೂರು | ಸೆಪ್ಟಂಬರ್ / ಅಕ್ಟೋಬರ್-2022 ರ ಪರೀಕ್ಷಾ ಕಾರ್ಯ ನಿರ್ವಹಿಸಿದ ಒಟ್ಟು 02 ಕಂತಿನ ಬಿಲ್ಲಿನ ಮೊತ್ತ. | ರೂ.56,02,834-00 |
| 02 | 03.01.2023 | ಮೆ:ಯುನಿಕ್ಲೇರ್ ಸಲ್ಯೂಷನ್ ಪ್ರೈ ಲಿ., ಬೆಂಗಳೂರು | ಸೆಪ್ಟಂಬರ್ / ಅಕ್ಟೋಬರ್-2022 ರ ಪರೀಕ್ಷಾ ಕಾರ್ಯ ನಿರ್ವಹಿಸಿದ ಒಟ್ಟು 02 ಕಂತಿನ ಬಿಲ್ಲಿನ ಮೊತ್ತ. | ರೂ.35,40,098-00 |

ಸದರಿ ಸಂಸ್ಥೆಗಳ 02 ಕಂತಿನ ಬಿಲ್ಲುಗಳನ್ನು ಉಪ ಸಮಿತಿ ಅಧ್ಯಕ್ಷರು ಮತ್ತು ಸದಸ್ಯರುಗಳು ಕೂಲಂಕುಷವಾಗಿ ಪರಿಶೀಲಿಸಿ ಹಣ ಪಾವತಿಸಲು ಮಂಜೂರಾತಿ ನೀಡಿರುತ್ತಾರೆ. ಆದ್ದರಿಂದ, ದಿನಾಂಕ:25.01.2023ರ ಸಿಂಡಿಕೇಟ್ ಅಸಾಮಾನ್ಯ ಸಭೆಯ ಅವಗಾಹನೆಗೆ ಹಾಗೂ ಅನುಮೋದನೆಗೆ ಸಲ್ಲಿಸಲಾಗಿದೆ.

**ನಿರ್ಣಯ**

ಬಿಲ್ಲುಗಳ ವಿವರಗಳು ಈ ಕೆಳಕಂಡಂತಿದೆ

| ಕ್ರ.ಸಂ | ಸಭೆ ನಡೆದ ದಿನಾಂಕ | ಬಿಲ್ಲು ಸಲ್ಲಿಸಿದ ಸಂಸ್ಥೆಯ ಹೆಸರು | ವಿವರ | ಬಿಲ್ಲಿನ ಮೊತ್ತ |
|---|---|---|---|---|
| 01 | 03.01.2023 | ಮೆ:ಲಾಜಿಸಿಸ್ಸ್ , ಬೆಂಗಳೂರು | ಸೆಪ್ಟಂಬರ್ / ಅಕ್ಟೋಬರ್-2022 ರ ಪರೀಕ್ಷಾ ಕಾರ್ಯ ನಿರ್ವಹಿಸಿದ ಒಟ್ಟು 02 ಕಂತಿನ ಬಿಲ್ಲಿನ ಮೊತ್ತ. | ರೂ.56,02,834-00 |
| 02 | 03.01.2023 | ಮೆ:ಯುನಿಕ್ಲೇರ್ ಸಲ್ಯೂಷನ್ ಪ್ರೈ ಲಿ., ಬೆಂಗಳೂರು | ಸೆಪ್ಟಂಬರ್ / ಅಕ್ಟೋಬರ್-2022 ರ ಪರೀಕ್ಷಾ ಕಾರ್ಯ ನಿರ್ವಹಿಸಿದ ಒಟ್ಟು 02 ಕಂತಿನ ಬಿಲ್ಲಿನ ಮೊತ್ತ. | ರೂ.35,40,098-00 |

ವಿಶ್ವವಿದ್ಯಾನಿಲಯದ ಪರೀಕ್ಷಾಂಗ ವಿಭಾಗದಲ್ಲಿ ದಿನಾಂಕ:03.01.2023ರಂದು ಜರುಗಿದ ಉಪ ಸಮಿತಿ ಸಭೆಯಲ್ಲಿ ಅಧ್ಯಕ್ಷರು ಮತ್ತು ಸದಸ್ಯರುಗಳು ಕೂಲಂಕುಷವಾಗಿ ಪರಿಶೀಲಿಸಿ ಅನುಮೋದನೆ ಪಡೆಯಲಾಗಿದ್ದ, ಮೇಲ್ಕಂಡ ಸಂಸ್ಥೆಗಳ 02 ಕಂತಿನ ಬಿಲ್ಲುಗಳ ಮೊತ್ತವನ್ನು ಪಾವತಿಸಲು ಸಭೆಯು ಒಮ್ಮತದಿಂದ ಅನುಮೋದಿಸಿತು.

ಕುಲಸಚಿವರು

ಕುಲಪತಿಗಳು
ದಾವಣಗೆರೆ ವಿಶ್ವವಿದ್ಯಾನಿಲಯ

| ಪರೀಕ್ಷಾಂಗ ವಿಭಾಗ | |
|---|---|
| ವಿಷಯ ಸಂಖ್ಯೆ: | ಸಿಂ.02(b)/(01/23) |

**-: ಟಿಪ್ಪಣಿ :-**

ವಿಷಯಃ ವಿಶ್ವವಿದ್ಯಾನಿಲಯದ 10ನೇ ವಾರ್ಷಿಕ ಘಟಿಕೋತ್ಸವ ಸಮಾರಂಭದಲ್ಲಿ ಗೌರವ ಡಾಕ್ಟರೇಟ್ ನೀಡಲು ಘನತೆವೆತ್ತ ಮಾನ್ಯ ರಾಜ್ಯಪಾಲರಿಗೆ ಅರ್ಜಿಗಳನ್ನು ಕಳುಹಿಸುವ ಕುರಿತು.

**ಪ್ರಸ್ತಾವನೆ:**

ವಿಶ್ವವಿದ್ಯಾನಿಲಯದಲ್ಲಿ ಫೆಬ್ರವರಿ-2023ನೇ ಮಾಹೆಯಲ್ಲಿ ಜರುಗಲಿರುವ ವಿಶ್ವವಿದ್ಯಾನಿಲಯದ 10ನೇ ವಾರ್ಷಿಕ ಘಟಿಕೋತ್ಸವ ಸಮಾರಂಭದದಲ್ಲಿ ಗೌರವ ಡಾಕ್ಟರೇಟ್ ಪದವಿ ನೀಡುವ ಸಂಬಂಧ 06 (CV) ಮನವಿಗಳು ಸ್ವೀಕೃತಗೊಂಡಿದ್ದು, ಸದರಿ ಅರ್ಜಿಗಳನ್ನು ಘನತೆವೆತ್ತ ಮಾನ್ಯ ರಾಜ್ಯಪಾಲರಿಗೆ ಸಲ್ಲಿಸುವ ಸಂಬಂಧ ದಿನಾಂಕ:25.01.2023ರ ಸಿಂಡಿಕೇಟ್ ಅಸಾಮಾನ್ಯ ಸಭೆಯ ಅವಗಾಹನೆಗೆ ಹಾಗೂ ಅನುಮೋದನೆಗೆ ಸಲ್ಲಿಸಲಾಗಿದೆ.

**ನಿರ್ಣಯ**

ವಿಶ್ವವಿದ್ಯಾನಿಲಯದ 10ನೇ ವಾರ್ಷಿಕ ಘಟಿಕೋತ್ಸವ ಸಮಾರಂಭದದಲ್ಲಿ ಗೌರವ ಡಾಕ್ಟರೇಟ್ ಪದವಿ ನೀಡುವ ಸಂಬಂಧ ವಿಶ್ವವಿದ್ಯಾನಿಲಯಕ್ಕೆ ಸ್ವೀಕೃತಗೊಂಡ 06 (CV) ಮನವಿಗಳನ್ನು ಘನತೆವೆತ್ತ ಮಾನ್ಯ ರಾಜ್ಯಪಾಲರಿಗೆ ಕಳುಹಿಸಲು ಸಭೆಯು ಒಮ್ಮತದಿಂದ ಅನುಮೋದನೆ ನೀಡಿತು.

ಕುಲಸಚಿವರು

ಕುಲಪತಿಗಳು
ದಾವಣಗೆರೆ ವಿಶ್ವವಿದ್ಯಾನಿಲಯ

| ಪರೀಕ್ಷಾಂಗ ವಿಭಾಗ | |
|---|---|
| ವಿಷಯ ಸಂಖ್ಯೆ: | ಸಿಂ.02(೮)/(01/23) |

**-: ಟಿಪ್ಪಣಿ :-**

ವಿಷಯಃ ವಿಶ್ವವಿದ್ಯಾನಿಲಯದ 10ನೇ ವಾರ್ಷಿಕ ಘಟಿಕೋತ್ಸವ ಸಮಾರಂಭದಲ್ಲಿ ಗೌರವ ಡಾಕ್ಟರೇಟ್ ನೀಡಲು ಘನತೆವೆತ್ತ ರಾಜ್ಯಪಾಲರು ಸಮಿತಿಯನ್ನು ರಚಿಸಬೇಕಾಗಿದ್ದು, ಸಿಂಡಿಕೇಟ್ ವತಿಯಿಂದ ಒಬ್ಬ ಪ್ರತಿನಿಧಿಯನ್ನು ಸೂಚಿಸುವ ಕುರಿತು.

**ಪ್ರಸ್ತಾವನೆ:**

ವಿಶ್ವವಿದ್ಯಾನಿಲಯದಲ್ಲಿ ಫೆಬ್ರವರಿ-2023ನೇ ಮಾಹೆಯಲ್ಲಿ ಜರುಗಲಿರುವ ವಿಶ್ವವಿದ್ಯಾನಿಲಯದ 10ನೇ ವಾರ್ಷಿಕ ಘಟಿಕೋತ್ಸವ ಸಮಾರಂಭದಲ್ಲಿ ಘನತೆವೆತ್ತ ಮಾನ್ಯ ರಾಜ್ಯಪಾಲರು ರಚಿಸಲ್ಪಡುವ ಸಮಿತಿಗೆ ವಿಶ್ವವಿದ್ಯಾನಿಲಯದ ಸಿಂಡಿಕೇಟ್ ವತಿಯಿಂದ ಒಬ್ಬ ಪ್ರತಿನಿಧಿಯನ್ನು ಆಯ್ಕೆ ಮಾಡಬೇಕಾಗಿರುವ ಕುರಿತು ದಿನಾಂಕ:25.01.2023ರ ಸಿಂಡಿಕೇಟ್ ಅಸಾಮಾನ್ಯ ಸಭೆಯ ಅವಗಾಹನೆಗೆ ಹಾಗೂ ಅನುಮೋದನೆಗೆ ಸಲ್ಲಿಸಲಾಗಿದೆ.

**ನಿರ್ಣಯ**

ವಿಶ್ವವಿದ್ಯಾನಿಲಯದ 10ನೇ ವಾರ್ಷಿಕ ಘಟಿಕೋತ್ಸವ ಸಮಾರಂಭದಲ್ಲಿ ಗೌರವ ಡಾಕ್ಟರೇಟ್ ನೀಡಲು ಘನತೆವೆತ್ತ ಮಾನ್ಯ ರಾಜ್ಯಪಾಲರು ರಚಿಸಲ್ಪಡುವ ಸಮಿತಿಗೆ ಡಾ. ಕೆ. ಸಿದ್ದಪ್ಪ, ವಿಶ್ರಾಂತ ಕುಲಪತಿಗಳು, ಬೆಂಗಳೂರು ವಿಶ್ವವಿದ್ಯಾನಿಲಯ, ಬೆಂಗಳೂರು - ಇವರನ್ನು ಸಿಂಡಿಕೇಟ್ ವತಿಯಿಂದ ಪ್ರತಿನಿಧಿಯನ್ನಾಗಿ ಮಾಡಲು ಒಮ್ಮತದಿಂದ ಸಭೆಯು ನಿರ್ಣಯಿಸಿತು.

ಕುಲಸಚಿವರು

ಕುಲಪತಿಗಳು
ದಾವಣಗೆರೆ ವಿಶ್ವವಿದ್ಯಾನಿಲಯ

| ಮಾ.ಸ.ನಿ ವಿಭಾಗ | |
|---|---|
| ವಿಷಯ ಸಂಖ್ಯೆ: | ಸಿಂ.03(a)/(01/23) |

## -: ಟಿಪ್ಪಣಿ :-

**ವಿಷಯಃ ಕ್ರೀಡಾ ವಿಭಾಗಕ್ಕೆ ಕ್ರೀಡಾ ಚಟುವಟಿಕೆಗಳಿಗೆ ಸಂಬಂಧಿಸಿದಂತೆ ಕ್ರೀಡಾ ಅಧಿಕಾರಿಯನ್ನು ನೇಮಕ ಮಾಡಿಕೊಳ್ಳುವ ಬಗ್ಗೆ.**

ಉಲ್ಲೇಖಃ 1. ಶ್ರೀ ವಸ್ತ್ರದ್ ಬಸವರಾಜ್ ಗುರುಸಿದ್ದಯ್ಯ, ಪ್ರಾಂಶುಪಾಲಕರು, ನರೇಂದ್ರ ಬಿ.ಪಿ.ಇಡಿ. ಕಾಲೇಜು, ವಿಜಯಪುರ ಇವರ ಮನವಿ ದಿನಾಂಕಃ 11.01.2023

2. ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕಃ 18.01.2023

*********

**ಪ್ರಸ್ತಾವನೆ:**

ಉಲ್ಲೇಖ (1)ರ ಪತ್ರದಲ್ಲಿ ಶ್ರೀ ವಸ್ತ್ರದ್ ಬಸವರಾಜ್ ಗುರುಸಿದ್ದಯ್ಯ, ಪ್ರಾಂಶುಪಾಲರು, ನರೇಂದ್ರ ಬಿ.ಪಿ.ಇಡಿ. ಕಾಲೇಜು, ಕಲೆಬಾಗ್, ವಿಜಯಪುರ ಇವರು ತಮಗೆ ಕ್ರೀಡಾ ವಿಭಾಗದಲ್ಲಿ 30 ವರ್ಷಗಳ ಬೋಧನಾ ಅನುಭವವನ್ನು ಹೊಂದಿರುವುದರಿಂದ ಹಾಗೂ ನಮ್ಮ ವಿಶ್ವವಿದ್ಯಾನಿಲಯದ ಕ್ರೀಡಾ ವಿಭಾಗದಲ್ಲಿ ದೈಹಿಕ ಶಿಕ್ಷಣ ನಿರ್ದೇಶಕರ ಹುದ್ದೆ ಖಾಲಿ ಇರುವುದರಿಂದ ತಮಗೆ ದೈಹಿಕ ಶಿಕ್ಷಣ ನಿರ್ದೇಶಕರ ಹುದ್ದೆಗೆ ನೇಮಕ ಮಾಡುವಂತೆ ಕೋರಿರುತ್ತಾರೆ. ಈ ಕುರಿತು ಮಾನ್ಯ ಕುಲಪತಿಗಳ ಆದೇಶಾನುಸಾರ ಸದರಿ ವಿಷಯಕ್ಕೆ ಸಂಬಂಧಿಸಿದಂತೆ ದಿನಾಂಕಃ25.01.2023 ರಂದು ನಡೆಯುವ ಸಿಂಡಿಕೇಟ್ ಅಸಾಮಾನ್ಯ ಸಭೆಯ ಅವಗಾಹನೆ ಹಾಗೂ ಶಿಫಾರಸ್ಸಿಗೆ ಸಲ್ಲಿಸಿದೆ.

**ನಿರ್ಣಯ**

ವಿಶ್ವವಿದ್ಯಾನಿಲಯದ ಪಿ. ಜಿ. ಜಮ್ಖಾನಾ ವತಿಯಿಂದ ಸ್ನಾತಕೋತ್ತರ ವಿದ್ಯಾರ್ಥಿಗಳ ಕ್ರೀಡಾ ಚಟುವಟಿಕೆಗಳಿಗೆ ಸಂಬಂಧಿಸಿದಂತೆ ಕ್ರೀಡಾ ಅಧಿಕಾರಿಯನ್ನು ನೇಮಕ ಮಾಡಲು ಈ ಕೆಳಕಂಡ ಅಂಶಗಳನ್ನೊಳಗೊಂಡಂತೆ ಪತ್ರಿಕಾ ಪ್ರಕಟಣೆ ನೀಡಿಲು ಸಭೆಯು ಒಮ್ಮತದಿಂದ ಅನುಮೋದನೆ ನೀಡಿತು.

1) ಎಂ.ಪಿ.ಇಡಿ/ ಪಿ.ಹೆಚ್.ಡಿ ಪದವಿಯನ್ನು ಹೊಂದಿರಬೇಕು.

2) ಕ್ರೀಡಾ ವಿಭಾಗದಲ್ಲಿ ಕಾರ್ಯ ನಿರ್ವಹಿಸಿ ನಿವೃತ್ತ ಹೊಂದಿದವರಾಗಿರಬೇಕು.

3) ಮಾಹೆಯಾನ ರೂ.30,000/-ಗಳ ಗೌರವಧನ ನೀಡಲಾಗುವುದು.

ಕುಲಸಚಿವರು

ಕುಲಪತಿಗಳು
ದಾವಣಗೆರೆ ವಿಶ್ವವಿದ್ಯಾನಿಲಯ

| ಮಾ.ಸ.ನಿ ವಿಭಾಗ | |
|---|---|
| ವಿಷಯ ಸಂಖ್ಯೆ: | ಸಿಂ.03(b)/(01/23) |

# –: ಟಿಪ್ಪಣಿ :–

**ವಿಷಯಃ ನಿವೃತ್ತ ಸಹಾಯಕ ನಿಬಂಧಕರನ್ನು ವಿಶ್ವವಿದ್ಯಾನಿಲಯದ ಹಣಕಾಸು ವಿಭಾಗಕ್ಕೆ ಲೆಕ್ಕಪರಿಶೋಧನಾಧಿಕಾರಿಯಾಗಿ ನೇಮಕ ಮಾಡಿರುವ ಬಗ್ಗೆ.**

ಉಲ್ಲೇಖಃ ವಿಶ್ವವಿದ್ಯಾನಿಲಯದ ಅಧಿಕೃತ ಜ್ಞಾಪನ ಸಂಖ್ಯೆಃದಾವಿವಿ/ಮಾಸನಿ/128/2022–23/4068, ದಿನಾಂಕಃ 13.01.2023

*********

**ಪ್ರಸ್ತಾವನೆ:**

ವಿಶ್ವವಿದ್ಯಾನಿಲಯದ ಉಲ್ಲೇಖಿತ ಅಧಿಕೃತ ಜ್ಞಾಪನ ಪತ್ರದಲ್ಲಿ ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಅಧಿನಿಯಮ 2000ರ ಪ್ರಕರಣ 56ರ ಪ್ರಕಾರ ಬೋಧಕೇತರ ನೌಕರರನ್ನು ನೇಮಕ ಮಾಡಿಕೊಳ್ಳಲು ಮಾನ್ಯ ಕುಲಪತಿಗಳಿಗೆ ಪ್ರದತ್ತವಾಗಿರುವ ಅಧಿಕಾರದನ್ವಯ, ಶ್ರೀ ಜಿ.ಎಸ್. ಮರುಳಸಿದ್ದಪ್ಪ, ನಿವೃತ್ತ ಸಹಾಯಕ ನಿಬಂಧಕರು, ಬಿ.ಬಿ.ಎಂ.ಪಿ. ಬ್ಯಾಟರಾಯನಪುರ – ಇವರನ್ನು ವಿಶ್ವವಿದ್ಯಾನಿಲಯದ ಹಣಕಾಸು ವಿಭಾಗಕ್ಕೆ ತಾತ್ಕಾಲಿಕವಾಗಿ ಮಾಹೆಯಾನ ಗೌರವ ಸಂಭಾವನೆ ರೂ.35,000/–ಗಳೊಂದಿಗೆ ಮೂರು ತಿಂಗಳ ಅವಧಿಗೆ ಲೆಕ್ಕ ಪರಿಶೋಧನಾಧಿಕಾರಿಗಳನ್ನಾಗಿ ನೇಮಕ ಮಾಡಿರುವ ಬಗ್ಗೆ ದಿನಾಂಕಃ25.01.2023 ರಂದು ನಡೆಯುವ ಸಿಂಡಿಕೇಟ್ ಅಸಾಮಾನ್ಯ ಸಭೆಯ ಘಟನೋತ್ತರ ಅನುಮೋದನೆಗಾಗಿ ಸಲ್ಲಿಸಿದೆ.

**ನಿರ್ಣಯ**

ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಅಧಿನಿಯಮ 2000ರ ಪ್ರಕರಣ 56ರ ಪ್ರಕಾರ ಬೋಧಕೇತರ ನೌಕರರನ್ನು ನೇಮಕ ಮಾಡಿಕೊಳ್ಳಲು ಮಾನ್ಯ ಕುಲಪತಿಗಳಿಗೆ ಪ್ರದತ್ತವಾಗಿರುವ ಅಧಿಕಾರದನ್ವಯ, ಶ್ರೀ ಜಿ. ಎಸ್. ಮರುಳಸಿದ್ದಪ್ಪ, ನಿವೃತ್ತ ಸಹಾಯಕ ನಿಬಂಧಕರು, ಬಿ.ಬಿ.ಎಂ.ಪಿ. ಬ್ಯಾಟರಾಯನಪುರ – ಇವರನ್ನು ವಿಶ್ವವಿದ್ಯಾನಿಲಯದ ಹಣಕಾಸು ವಿಭಾಗಕ್ಕೆ ತಾತ್ಕಾಲಿಕವಾಗಿ ಮಾಹೆಯಾನ ಗೌರವ ಸಂಭಾವನೆ ರೂ.35,000/–ಗಳೊಂದಿಗೆ ಮೂರು ತಿಂಗಳ ಅವಧಿಗೆ ಲೆಕ್ಕ ಪರಿಶೋಧನಾಧಿಕಾರಿಯನ್ನಾಗಿ ನೇಮಕ ಮಾಡಿರುವುದನ್ನು ಸಭೆಯು ಒಮ್ಮತದಿಂದ ಘಟನೋತ್ತರ ಅನುಮೋದನೆ ನೀಡಿತು.

ಕುಲಸಚಿವರು

ಕುಲಪತಿಗಳು
ದಾವಣಗೆರೆ ವಿಶ್ವವಿದ್ಯಾನಿಲಯ

| ಮಾ.ಸ.ನಿ ವಿಭಾಗ | |
|---|---|
| ವಿಷಯ ಸಂಖ್ಯೆ: | ಸಿಂ.03(c)/(01/23) |

## -: ಟಿಪ್ಪಣಿ :-

**ವಿಷಯಃ ವಿಶ್ವವಿದ್ಯಾನಿಲಯದ ಆರೋಗ್ಯ ಕೇಂದ್ರಕ್ಕೆ ಅರೆಕಾಲಿಕ ಮಹಿಳಾ ವೈದ್ಯಾಧಿಕಾರಿಯನ್ನು ನೇಮಕ ಮಾಡುವ ಬಗ್ಗೆ.**

ಉಲ್ಲೇಖಃ 1. ವಿಶ್ವವಿದ್ಯಾನಿಲಯದಲ್ಲಿ ದಿನಾಂಕಃ14.11.2022ರಂದು ನಡೆದ ಸಿಂಡಿಕೇಟ್ ಸಭೆಯ ನಿರ್ಣಯ.

2. ವಿಶ್ವವಿದ್ಯಾನಿಲಯದ ಅಧಿಸೂಚನೆ ಸಂಖ್ಯೆಃ ದಾವಿವಿ/ಮಾಸನಿ/ 270/2022-23/3865, ದಿನಾಂಕಃ 03.01.2023

*********

**ಪ್ರಸ್ತಾವನೆ:**

ವಿಶ್ವವಿದ್ಯಾನಿಲಯದಲ್ಲಿ ದಿನಾಂಕಃ14.11.2022ರಂದು ನಡೆದ ಸಿಂಡಿಕೇಟ್ ಸಭೆಯ ನಿರ್ಣಯದಂತೆ ವಿಶ್ವವಿದ್ಯಾನಿಲಯದ ಆರೋಗ್ಯ ಕೇಂದ್ರಕ್ಕೆ MBBS ಅಥವಾ BAMS ಪದವಿ ಪಡೆದ ಅರೆಕಾಲಿಕ ಮಹಿಳಾ ವೈದ್ಯಾಧಿಕಾರಿಗಳನ್ನು 11 ತಿಂಗಳ ಅವಧಿಗೆ ನೇಮಕ ಮಾಡಿಕೊಳ್ಳುವ ಸಲುವಾಗಿ ಉಲ್ಲೇಖ (2)ರಲ್ಲಿ ನೇಮಕಾತಿಗೆ ಸಂಬಂಧಿಸಿದಂತೆ ಅರ್ಜಿ ಆಹ್ವಾನಿಸಲು ಅಧಿಸೂಚನೆಯನ್ನು ಹೊರಡಿಸಲಾಗಿತ್ತು. ಸದರಿ ಅಧಿಸೂಚನೆಯಂತೆ ಈ ಕೆಳಕಂಡ ಅಭ್ಯರ್ಥಿಗಳು ಅರ್ಜಿಗಳನ್ನು ಸಲ್ಲಿಸಿರುತ್ತಾರೆ.

| ಕ್ರ.ಸಂ. | ಅಭ್ಯರ್ಥಿಯ ಹೆಸರು | ಪದವಿ |
|---|---|---|
| 01 | ಡಾ. ಸೌಜನ್ಯ ಮಡಿವಾಳ | BAMS |
| 02 | ಡಾ. ಮಮತ ಉಕ್ಕುಂದ | BAMS |
| 03 | ಡಾ. ಮಧು ಪಿ.ಎಂ. | BAMS |
| 04 | ಡಾ. ಎಸ್.ಜಿ. ಪವಿತ್ರ | BAMS |
| 05 | ಡಾ. ಚೇತನ ಎಂ.ಹೆಚ್. | BAMS |

ಮೇಲ್ಕಂಡ ಅಭ್ಯರ್ಥಿಗಳಲ್ಲಿ ಒಬ್ಬರನ್ನು ವಿಶ್ವವಿದ್ಯಾನಿಲಯದ ಆರೋಗ್ಯ ಕೇಂದ್ರಕ್ಕೆ ಅರೆಕಾಲಿಕ ವೈದ್ಯಾಧಿಕಾರಿಗಳನ್ನಾಗಿ ನೇಮಕ ಮಾಡುವ ಸಲುವಾಗಿ ಸಂದರ್ಶನ ಏರ್ಪಡಿಸಲು ಹಾಗೂ ಮುಂದಿನ ಸೂಕ್ತ ಕ್ರಮಕೈಗೊಳ್ಳುವ ಸಲುವಾಗಿ ದಿನಾಂಕಃ25.01.2023 ರಂದು ನಡೆಯುವ ಸಿಂಡಿಕೇಟ್ ಅಸಾಮಾನ್ಯ ಸಭೆಯ ಅನುಮೋದನೆಗಾಗಿ ಸಲ್ಲಿಸಿದೆ.

**ನಿರ್ಣಯ**

ವಿಶ್ವವಿದ್ಯಾನಿಲಯದ ಆರೋಗ್ಯ ಕೇಂದ್ರಕ್ಕೆ MBBS ಅಥವಾ BAMS ಪದವಿ ಪಡೆದ ಅರೆಕಾಲಿಕ ಮಹಿಳಾ ವೈದ್ಯಾಧಿಕಾರಿಗಳನ್ನು 11 ತಿಂಗಳ ಅವಧಿಗೆ ನೇಮಕ ಮಾಡಿಕೊಳ್ಳುವ ಸಲುವಾಗಿ ಪತ್ರಿಕಾ ಪ್ರಕಟಣೆಯನ್ನು ನೀಡಲಾಗಿದ್ದು, ಸ್ವೀಕೃತಗೊಂಡ 05 ಅರ್ಜಿಗಳನ್ನು ಪರಿಶೀಲಿಸುವ ಸಲುವಾಗಿ ಒಂದು ಸಮಿತಿಯನ್ನು ರಚಿಸಿ ಸಂದರ್ಶನ ನಡೆಸುವ ಮೂಲಕ ಮಾಹೆಯಾನ ರೂ.30,000/-ಗಳ ಗೌರವ ಸಂಭಾವನೆಯನ್ನು ನಿಗಧಿಪಡಿಸಿ ಕ್ರಮ ಕೈಗೊಳ್ಳುವಂತೆ ಸಭೆಯು ಒಮ್ಮತದಿಂದ ಮಾನ್ಯ ಕುಲಪತಿಗಳಿಗೆ ಅಧಿಕಾರ ನೀಡಿತು.

ಕುಲಸಚಿವರು

ಕುಲಪತಿಗಳು
ದಾವಣಗೆರೆ ವಿಶ್ವವಿದ್ಯಾನಿಲಯ

| ಮಾ.ಸ.ನಿ ವಿಭಾಗ | |
|---|---|
| ವಿಷಯ ಸಂಖ್ಯೆ: | ಸಿಂ.03(d)/(01/23) |

## –ಃ ಟಿಪ್ಪಣಿ ಃ–

**ವಿಷಯಃ ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ಕೇಂದ್ರ, ಚಿತ್ರದುರ್ಗ – ಇಲ್ಲಿನ ಸಂಯೋಜನಾಧಿಕಾರಿಗಳ ಬದಲಾವಣೆ ಕುರಿತು.**

ಉಲ್ಲೇಖಃ
1. ವಿಶ್ವವಿದ್ಯಾನಿಲಯದ ಅಧಿಕೃತ ಜ್ಞಾಪನ ಪತ್ರ ಸಂಖ್ಯೆಃ ದಾವಿವಿ/ಮಾಸನಿ/514/2019–20/9886, ದಿನಾಂಕಃ13.02.2020.
2. ಸಂಯೋಜನಾಧಿಕಾರಿಗಳು, ಸ್ನಾತಕೋತ್ತರ ಕೇಂದ್ರ, ಚಿತ್ರದುರ್ಗ ಇವರ ಪತ್ರ ಸಂಖ್ಯೆಃ ದಾವಿವಿ/ಸ್ನಾಕೇಚಿ/2022–23, ದಿನಾಂಕಃ 09.01.2023.
3. ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕಃ 20.01.2023

*********

ವಿಶ್ವವಿದ್ಯಾನಿಲಯದ ಉಲ್ಲೇಖ (1)ರ ಅಧಿಕೃತ ಜ್ಞಾಪನ ಪತ್ರದಲ್ಲಿ ಡಾ. ಹೆಚ್. ವಿಶ್ವನಾಥ್, ಸಹ ಪ್ರಾಧ್ಯಾಪಕರು, ಸ್ನಾತಕೋತ್ತರ ಕನ್ನಡ ಅಧ್ಯಯನ ವಿಭಾಗ – ಇವರನ್ನು ಸ್ನಾತಕೋತ್ತರ ಕೇಂದ್ರ, ಜಿ.ಆರ್. ಹಳ್ಳಿ, ಚಿತ್ರದುರ್ಗದ ಸಂಯೋಜನಾಧಿಕಾರಿಗಳನ್ನಾಗಿ ಎರಡು ವರ್ಷಗಳ ಅವಧಿಗೆ ಅಥವಾ ಮುಂದಿನ ಆದೇಶದವರೆಗೆ ನೇಮಕ ಮಾಡಲಾಗಿತ್ತು.

ಈಗ ಉಲ್ಲೇಖ (2)ರ ಪತ್ರದಲ್ಲಿ ಡಾ. ಹೆಚ್. ವಿಶ್ವನಾಥ್ ಇವರು ಹೃದಯ ಸಂಬಂಧ ಹಾಗೂ ನೇತ್ರ ಚಿಕಿತ್ಸೆಗೆ ಒಳಪಟ್ಟಿರುವುದರಿಂದ ಆರೋಗ್ಯದ ದೃಷ್ಠಿಯಿಂದ ತಮ್ಮನ್ನು ಸ್ನಾತಕೋತ್ತರ ಕೇಂದ್ರ, ಜಿ.ಆರ್. ಹಳ್ಳಿ ಚಿತ್ರದುರ್ಗದ ಸಂಯೋಜನಾಧಿಕಾರಿಗಳ ಹುದ್ದೆಯಿಂದ ಬಿಡುಗಡೆಗೊಳಿಸುವಂತೆ ಕೋರಿರುತ್ತಾರೆ. ಈ ಕುರಿತು ಉಲ್ಲೇಖ (3)ರ ಮಾನ್ಯ ಕುಲಪತಿಗಳ ಆದೇಶಾನುಸಾರ ಸದರಿ ವಿಷಯವನ್ನು ದಿನಾಂಕಃ25.01.2023 ರಂದು ನಡೆಯುವ ಸಿಂಡಿಕೇಟ್ ಅಸಾಮಾನ್ಯ ಸಭೆಯ ಅನುಮೋದನೆಗಾಗಿ ಸಲ್ಲಿಸಿದೆ.

### ನಿರ್ಣಯ

ಡಾ. ಹೆಚ್. ವಿಶ್ವನಾಥ್, ಸಹ ಪ್ರಾಧ್ಯಾಪಕರು, ಸ್ನಾತಕೋತ್ತರ ಕನ್ನಡ ಅಧ್ಯಯನ ವಿಭಾಗ – ಇವರನ್ನು ಸ್ನಾತಕೋತ್ತರ ಕೇಂದ್ರ, ಜಿ.ಆರ್. ಹಳ್ಳಿ, ಚಿತ್ರದುರ್ಗದ ಸಂಯೋಜನಾಧಿಕಾರಿಗಳನ್ನಾಗಿ ಮುಂದಿನ ಮೂರು ತಿಂಗಳವರೆಗೆ ಮುಂದುವರೆಸಲು ಸಭೆಯು ನಿರ್ಣಯಿಸಿತು.

ಕುಲಸಚಿವರು

ಕುಲಪತಿಗಳು
ದಾವಣಗೆರೆ ವಿಶ್ವವಿದ್ಯಾನಿಲಯ

| ಮಾ.ಸ.ನಿ ವಿಭಾಗ | |
|---|---|
| ವಿಷಯ ಸಂಖ್ಯೆ: | ಸಿಂ.03(ಅ)/(01/23) |

## –ಃ ಟಿಪ್ಪಣಿ ಃ–

**ವಿಷಯಃ ವಿಶ್ವವಿದ್ಯಾನಿಲಯದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಹಂಗಾಮಿ ಕಿರಿಯ ಸಹಾಯಕರುಗಳಿಗೆ ನೀಡಿದ "ಅಧಿಕೃತ ಜ್ಞಾಪನ" ಪತ್ರವನ್ನು ಹಿಂಪಡೆಯುವ ಕುರಿತು.**

ಉಲ್ಲೇಖಃ 1. ವಿಶ್ವವಿದ್ಯಾನಿಲಯದ ಅಧಿಕೃತ ಜ್ಞಾಪನ ಪತ್ರ ಸಂಖ್ಯೆಃ ದಾವಿವಿ/ಮಾಸನಿ/2/34/2021–22/6845, ದಿನಾಂಕಃ23.03.2022.
2. ವಿಶ್ವವಿದ್ಯಾನಿಲಯದ ಅಧಿಕೃತ ಜ್ಞಾಪನ ಪತ್ರ ಸಂಖ್ಯೆಃ ದಾವಿವಿ/ಮಾಸನಿ/2/35/2021–22/6846, ದಿನಾಂಕಃ23.03.2022.

*********

ವಿಶ್ವವಿದ್ಯಾನಿಲಯದಲ್ಲಿ ಸಂಚಿತ ವೇತನದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಶ್ರೀ ಶೋಭ್ಯಾನಾಯ್ಕ ಹೆಚ್ ಕೋ ಹನುಮಂತನಾಯ್ಕ ಹಾಗೂ ಶ್ರೀ ಪ್ರಶಾಂತ್ ವಿ – ಕಿರಿಯ ಸಹಾಯಕರು ಇವರುಗಳಿಗೆ ನೀಡಿದ ಉಲ್ಲೇಖ (1) ಮತ್ತು (2)ರ ಅಧಿಕೃತ ಜ್ಞಾಪನ ಪತ್ರಗಳನ್ನು ಹಿಂಪಡೆಯುವ ಸಲುವಾಗಿ ಸದರಿ ವಿಷಯವನ್ನು ದಿನಾಂಕಃ25.01.2023 ರಂದು ನಡೆಯುವ ಸಿಂಡಿಕೇಟ್ ಅಸಾಮಾನ್ಯ ಸಭೆಯ ಅನುಮೋದನೆಗಾಗಿ ಸಲ್ಲಿಸಿದೆ.

### ನಿರ್ಣಯ

ವಿಶ್ವವಿದ್ಯಾನಿಲಯದಲ್ಲಿ ಸಂಚಿತ ವೇತನದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಶ್ರೀ ಶೋಭ್ಯಾನಾಯ್ಕ ಹೆಚ್ ಕೋ ಹನುಮಂತನಾಯ್ಕ ಹಾಗೂ ಶ್ರೀ ಪ್ರಶಾಂತ್ ವಿ – ಕಿರಿಯ ಸಹಾಯಕರು, ಇವರುಗಳಿಗೆ ಉಲ್ಲೇಖ (1) ಮತ್ತು (2)ರಲ್ಲಿ ನೀಡಿರುವ ಅಧಿಕೃತ ಜ್ಞಾಪನ ಪತ್ರಗಳಿಗೆ ಸಂಬಂಧಿಸಿದಂತೆ ಸುದೀರ್ಘ ಚರ್ಚೆಯ ನಂತರ ಹಿಂಪಡೆಯಲು ಸಭೆಯು ಒಮ್ಮತದಿಂದ ಅನುಮೋದಿಸಿತು

ಕುಲಸಚಿವರು

ಕುಲಪತಿಗಳು
ದಾವಣಗೆರೆ ವಿಶ್ವವಿದ್ಯಾನಿಲಯ

| ಶೈಕ್ಷಣಿಕ ವಿಭಾಗ | |
|---|---|
| ವಿಷಯ ಸಂಖ್ಯೆ: | ಸಿಂ.04(a)/(01/23) |

## -: ಟಿಪ್ಪಣಿ :-

**ವಿಷಯ:** ವಿಶ್ವವಿದ್ಯಾನಿಲಯದಲ್ಲಿ 2023-24ನೇ ಶೈಕ್ಷಣಿಕ ಸಾಲಿನಿಂದ Master Of Computer Applications (MCA) ಪದವಿ ಕೋರ್ಸ್‌ನ್ನು ಪ್ರಾರಂಭಿಸುವ ಸಂಬಂಧ ಎಲ್ಲಾ ಸೌಕರ್ಯಗಳನ್ನು ಒದಗಿಸಲು ಮತ್ತು ಕಟ್ಟಡ ಮೀಸಲಿರಿಸಲು ಅನುಮೋದನೆ ಕುರಿತು.

******

ವಿಶ್ವವಿದ್ಯಾನಿಲಯದ ವ್ಯಾಪ್ತಿಯ ದಾವಣಗೆರೆ ಮತ್ತು ಚಿತ್ರದುರ್ಗ ಜಿಲ್ಲೆಗಳ ವ್ಯಾಪ್ತಿಯಲ್ಲಿನ 20 ಸಂಲಗ್ನಗೊಂಡ ಕಾಲೇಜುಗಳಲ್ಲಿ BCA ಪದವಿ ಹಾಗೂ 50 ಕಾಲೇಜುಗಳಲ್ಲಿ B.Sc.,(PCM/PMCS Combination) ಪದವಿಯನ್ನು ಬೋಧಿಸಲಾಗುತ್ತಿದೆ. ಪ್ರತಿ ವರ್ಷವೂ ಅಂದಾಜು 3000 ವಿದ್ಯಾರ್ಥಿಗಳು ಮೇಲ್ಕಂಡ ಕೋರ್ಸುಗಳಲ್ಲಿ ಪದವಿಗಳನ್ನು ಪಡೆಯುತ್ತಿದ್ದಾರೆ. ಈ ವಿದ್ಯಾರ್ಥಿಗಳು ಸ್ನಾತಕೋತ್ತರ ಕಂಪ್ಯೂಟರ್ ಶಿಕ್ಷಣದ ಅಧ್ಯಯನದಿಂದ ವಂಚಿತರಾಗುತ್ತಿದ್ದಾರೆ.

ಈ ಎರಡು ಜಿಲ್ಲೆಗಳ ವ್ಯಾಪ್ತಿಯ ಗ್ರಾಮೀಣ ಭಾಗದಲ್ಲಿ ಹಿಂದುಳಿದ/ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ ವಿದ್ಯಾರ್ಥಿಗಳು ಅಧಿಕ ಸಂಖ್ಯೆಯಲ್ಲಿ ತಾಂತ್ರಿಕ ಶಿಕ್ಷಣ ವ್ಯಾಸಂಗದಲ್ಲಿ ನಿರತರಾಗಿದ್ದು, ಸ್ನಾತಕೋತ್ತರ ಅಧ್ಯಯನ ಮತ್ತು ಸಂಶೋಧನೆಯಲ್ಲಿ ತೊಡಗಿಸಿಕೊಳ್ಳಲು ಅತ್ಯಂತ ಇಚ್ಛಾಶಕ್ತಿ ಹೊಂದಿರುತ್ತಾರೆ. ಆದರೆ ಪ್ರಸ್ತುತದಲ್ಲಿ ಅಧ್ಯಯನ ಸೌಲಭ್ಯಗಳು ಸಾಕಷ್ಟು ಪ್ರಮಾಣದಲ್ಲಿ ಲಭ್ಯವಿಲ್ಲ.

ದಾವಣಗೆರೆ ಮತ್ತು ಚಿತ್ರದುರ್ಗ ಜಿಲ್ಲೆಗಳ ಗ್ರಾಮೀಣ ಭಾಗದಲ್ಲಿ ನೆಲೆಸಿರುವ ಪರಿಶಿಷ್ಟ-ಜಾತಿ/ಪರಿಶಿಷ್ಟ-ಪಂಗಡ/ಹಿಂದುಳಿದ/ಅಲ್ಪಸಂಖ್ಯಾತ ವಿದ್ಯಾರ್ಥಿ ಹಾಗೂ ವಿದ್ಯಾರ್ಥಿನಿಯರು ಉನ್ನತ/ ಸ್ನಾತಕೋತ್ತರ ಶಿಕ್ಷಣ ಹಾಗೂ ಸಂಶೋಧನೆಯಲ್ಲಿ ಗಣನೀಯವಾಗಿ ಹಿಂದುಳಿದಿದ್ದಾರೆ. ಸರ್ಕಾರದ ಅಂಕಿ ಅಂಶಗಳ ಪ್ರಕಾರ ಈ ಎರಡು ಜಿಲ್ಲೆಗಳಲ್ಲಿನ ಗ್ರಾಮೀಣ ಭಾಗದಲ್ಲಿ ಉನ್ನತ ಶಿಕ್ಷಣ ಕಲಿಕಾ/ಸಂಶೋಧನಾ ಕ್ಷೇತ್ರದಲ್ಲಿ ಪ್ರಗತಿಯು ಬಹಳ ಕ್ಷೀಣವಾಗಿದೆ.

ಈ ಎರಡು ಜಿಲ್ಲೆಗಳಲ್ಲಿ ಬಹಳ ಮುಖ್ಯವಾಗಿ ಗ್ರಾಮೀಣ ಭಾಗದ ವಿದ್ಯಾರ್ಥಿಗಳನ್ನು ಉನ್ನತ ಶಿಕ್ಷಣ/ಸ್ನಾತಕೋತ್ತರ ಶಿಕ್ಷಣ ಹಾಗೂ ಸಂಶೋಧನೆಯಲ್ಲಿ ಕ್ರಿಯಾಶೀಲರನ್ನಾಗಿ ಮಾಡುವ ದಿಸೆಯಲ್ಲಿ ಸರ್ಕಾರದ ಉನ್ನತ ಶಿಕ್ಷಣ ಇಲಾಖೆಯು 18.08.2009ರಂದು ದಾವಣಗೆರೆ ವಿಶ್ವವಿದ್ಯಾನಿಲಯವನ್ನು ಪ್ರಾರಂಭಿಸಿದೆ, ಸರ್ಕಾರದ ಉದ್ದೇಶವನ್ನು ಜಾಗೃತಗೊಳಿಸುವ ಮತ್ತು ಗ್ರಾಮೀಣ ಭಾಗದಲ್ಲಿನ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ/ಹಿಂದುಳಿದ/ಅಲ್ಪಸಂಖ್ಯಾತ ವಿದ್ಯಾರ್ಥಿ ಹಾಗೂ ವಿದ್ಯಾರ್ಥಿನಿಯರನ್ನು ಸ್ನಾತಕೋತ್ತರ ಕಂಪ್ಯೂಟರ್ ಶಿಕ್ಷಣದ ಅಧ್ಯಯನದಲ್ಲಿ ಮತ್ತು ಸಂಶೋಧನೆಯಲ್ಲಿ ತೊಡಗಿಸಿಕೊಳ್ಳುವಂತೆ ಪ್ರೇರಣೆ ನೀಡುವ ಸಲುವಾಗಿ ನಮ್ಮ ವಿಶ್ವವಿದ್ಯಾನಿಲಯದಲ್ಲಿ 2023-24ನೇ ಶೈಕ್ಷಣಿಕ ಸಾಲಿನಿಂದ MCA ಸ್ನಾತಕೋತ್ತರ ಅಧ್ಯಯನ ಮತ್ತು ಸಂಶೋಧನಾ ಕೋರ್ಸ್‌ನ್ನು ಪ್ರಾರಂಭಿಸಲು ವಿಶ್ವವಿದ್ಯಾನಿಲಯದ ಪ್ರಾಧಿಕಾರಗಳು ನಿರ್ಣಯಿಸಿರುತ್ತದೆ.

ಕುಲಸಚಿವರು

ಕುಲಪತಿಗಳು
ದಾವಣಗೆರೆ ವಿಶ್ವವಿದ್ಯಾನಿಲಯ

ಅಲ್ಲದೆ ವಿಶ್ವವಿದ್ಯಾನಿಲಯದ ವ್ಯಾಪ್ತಿಯಲ್ಲಿನ ವಿದ್ಯಾರ್ಥಿ ಸಂಘಟನೆಗಳು ಹಾಗೂ ಉನ್ನತ ಶಿಕ್ಷಣಾಸಕ್ತರು ಈ ಬಗ್ಗೆ ಮನವಿ ಮಾಡಿರುತ್ತಾರೆ. ಈ ಹಿನ್ನೆಲೆಯಲ್ಲಿ AICTE ಸಂಸ್ಥೆಯ ಪೂರ್ವಾನುಮೋದನೆ ಪಡೆಯುವುದು ಅತ್ಯವಶ್ಯವಾಗಿರುತ್ತದೆ.

ಆದುದರಿಂದ ವಿಶ್ವವಿದ್ಯಾನಿಲಯದ ವ್ಯಾಪ್ತಿಯಲ್ಲಿ ವಿವಿಧ ವಿದ್ಯಾರ್ಥಿಗಳ ಸಮುದಾಯಗಳ ಬೇಡಿಕೆಯನ್ನು ಪರಿಗಣಿಸಿ, ವಿಶ್ವವಿದ್ಯಾನಿಲಯದ ಪ್ರಾಧಿಕಾರಗಳ ನಿರ್ಣಯವನ್ನು ಅಂಗೀಕರಿಸಿ, 2023–24ನೇ ಶೈಕ್ಷಣಿಕ ಸಾಲಿನಿಂದ MCA ಕೋರ್ಸ್‌ನ್ನು ಪ್ರಾರಂಭಿಸುವ ಸಲುವಾಗಿ AICTE ಸಂಸ್ಥೆಗೆ ಅವಶ್ಯವಿರುವ ದಾಖಲೆಗಳನ್ನು ಸಲ್ಲಿಸಿ ಸದರಿ ಕೋರ್ಸ್‌ನ್ನು ಪ್ರಾರಂಭಿಸುವ ಸಂಬಂಧ ಹಾಗೂ ಎಲ್ಲಾ ಸೌಕರ್ಯಗಳನ್ನು ಒದಗಿಸಲು ಮತ್ತು ಕಟ್ಟಡ ಮೀಸಲಿರಿಸುವ ಕುರಿತು ಸದರಿ ವಿಷಯವನ್ನು ದಿನಾಂಕ:25.01.2023ರಂದು ನಡೆಯಲಿರುವ ಸಿಂಡಿಕೇಟ್ ಅಸಾಮಾನ್ಯ ಸಭೆಯ ಅವಗಾಹನೆಗೆ ಹಾಗೂ ಅನುಮೋದನೆಗೆ ಸಲ್ಲಿಸಿದೆ.

## ನಿರ್ಣಯ

ವಿಶ್ವವಿದ್ಯಾನಿಲಯದಲ್ಲಿ 2023–24ನೇ ಶೈಕ್ಷಣಿಕ ಸಾಲಿನಿಂದ MCA ಸ್ನಾತಕೋತ್ತರ ಅಧ್ಯಯನ ವಿಭಾಗವನ್ನು ಪ್ರಾರಂಭಿಸುವ ಸಲುವಾಗಿ ಹಾಗೂ ಎಲ್ಲಾ ಸೌಕರ್ಯಗಳನ್ನು ಒದಗಿಸಲು ಮತ್ತು ಈ ಕೆಳಕಂಡಂತೆ ಕಟ್ಟಡ ಮೀಸಲಿರಿಸಿರುವ ಕುರಿತು AICTE ಸಂಸ್ಥೆಗೆ ಅವಶ್ಯವಿರುವ ದಾಖಲೆಗಳನ್ನು ಸಲ್ಲಿಸಿ ಸದರಿ MCA ಕೋರ್ಸ್‌ನ್ನು ಪ್ರಾರಂಭಿಸಲು ಸಭೆಯು ಒಮ್ಮತದಿಂದ ಅನುಮೋದನೆ ನೀಡಿತು.

| Particulars | Number of Rooms required | Carpet Area in $m^2$ per Room |
|---|---|---|
| Class Rooms | 1per Division per Year | 66 |
| Tutorial Rooms | 25% of total Class Room | 33 |
| Computer Laboratory | 1 | 66 |
| Computer Centre | 1 | 150 |
| Seminar Hall | 1 | 132 |
| Library | 1 | 100 |

ಕುಲಸಚಿವರು

ಕುಲಪತಿಗಳು
ದಾವಣಗೆರೆ ವಿಶ್ವವಿದ್ಯಾನಿಲಯ

| ಶೈಕ್ಷಣಿಕ ವಿಭಾಗ | |
|---|---|
| ವಿಷಯ ಸಂಖ್ಯೆ: | ಸಿಂ.04(b)/(01/23) |

# -ಃ ಟಿಪ್ಪಣಿ ಃ-

**ವಿಷಯ:** ದಾವಣಗೆರೆ ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ಪದವಿಯ M.Sc. Environmental Biotechnology ವಿಷಯದಲ್ಲಿ ಅತೀ ಹೆಚ್ಚು ಅಂಕ ಪಡೆದು ಪ್ರಥಮ ಶ್ರೇಣಿಯಲ್ಲಿ ಪಾಸಾದ ವಿದ್ಯಾರ್ಥಿಗೆ "Gowdra. Smt. Sheela Prasanna kumar, Gowdra. Sri M.B Prasanna kumar Muthugaduru" ಇವರ ಹೆಸರಿನಲ್ಲಿ ಸ್ವರ್ಣ ಪದಕವನ್ನು ಸ್ಥಾಪನೆ ಮಾಡುವ ಪ್ರಸ್ತಾವನೆಯನ್ನು ಸಿಂಡಿಕೇಟ್ ಸಭೆಯಲ್ಲಿ ಅನುಮೋದಿಸುವ ಕುರಿತು.

******

2022-23ನೇ ಶೈಕ್ಷಣಿಕ ಸಾಲಿಗೆ ಅನ್ವಯವಾಗುವಂತೆ ಸ್ವರ್ಣ ಪದಕ ದೇಣಿಗೆ ನೀಡಿರುವ ದಾನಿಗಳ ವಿವರಗಳು ಈ ಕೆಳಗಿನಂತಿವೆ.

| Sl. No. | Name of the Donor | Amount DD /Ch.No./ Date | In the Name of | Subject which related to |
|---|---|---|---|---|
| 1 | **Prof. Gopinath S.M.,**<br>S/o Prasanna kumar,<br>Sri Siddeshwara Prasanna<br>1st Main, 1st Cross, Near Hero show room,<br>Bheemasamudra Road,<br>Chowdeshwari Layout,<br>Chitradurga-577501. | **Rs.1,10,000/-**<br>DD No:534833<br>03.12.2022 | Gowdra. Smt. Sheela Prasanna kumar,<br>Gowdra. Sri M.B. Prasanna Kumar Muthugaduru.<br><br>**GOLD MEDAL** | 1. Scoring Highest Marks in Environmental Biotechnology Subject.<br>2. If tie in particular subject consider all 4th semester subjects who got highest marks. |

ಮೇಲ್ಕಂಡ ಸ್ವರ್ಣ ಪದಕ ದಾನಿಗಳು ಹಾಗೂ ಸದರಿಯವರು ಆಯ್ಕೆ ಮಾಡಿಕೊಂಡಿರುವ ಸ್ವರ್ಣ ಪದಕ ದಾನದ ವಿಷಯದ ವಿವರಗಳನ್ನು ದಿನಾಂಕ:25.01.2023 ರ ಸಿಂಡಿಕೇಟ್ ಅಸಾಮಾನ್ಯ ಸಭೆಯ ಅವಗಾಹನೆಗೆ ಹಾಗೂ ಅನುಮೋದನೆಗಾಗಿ ಸಲ್ಲಿಸಿದೆ.

## ನಿರ್ಣಯ

ದಾವಣಗೆರೆ ವಿಶ್ವವಿದ್ಯಾನಿಲಯದ ಜೈವಿಕ ತಂತ್ರಜ್ಞಾನ ಅಧ್ಯಯನ ವಿಭಾಗದ ಸ್ನಾತಕೋತ್ತರ ಪದವಿಯ M.Sc. Environmental Biotechnology ವಿಷಯದಲ್ಲಿ ಅತೀ ಹೆಚ್ಚು ಅಂಕ ಪಡೆದು ಪ್ರಥಮ ಶ್ರೇಣಿಯಲ್ಲಿ ಉತ್ತೀರ್ಣರಾದ ವಿದ್ಯಾರ್ಥಿಗೆ "Gowdra. Smt. Sheela Prasanna kumar, Gowdra. Sri M.B Prasanna kumar Muthugaduru" ಇವರ ಹೆಸರಿನಲ್ಲಿ ಸ್ವರ್ಣ ಪದಕವನ್ನು ಸ್ಥಾಪನೆ ಮಾಡಲು ಸಭೆಯು ಒಮ್ಮತದಿಂದ ಅನುಮೋದನೆ ನೀಡಿತು.

ಕುಲಸಚಿವರು

ಕುಲಪತಿಗಳು
ದಾವಣಗೆರೆ ವಿಶ್ವವಿದ್ಯಾನಿಲಯ

| ಶೈಕ್ಷಣಿಕ ವಿಭಾಗ | |
|---|---|
| ವಿಷಯ ಸಂಖ್ಯೆ: | ಸಿಂ.04(c)/(01/23) |

# -: ಟಿಪ್ಪಣಿ :-

ವಿಷಯ: ದಾವಣಗೆರೆ ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ಪದವಿಯ M.Sc. Enzymology/ Biocatalysis ವಿಷಯದಲ್ಲಿ ಅತೀ ಹೆಚ್ಚು ಅಂಕ ಪಡೆದು ಪ್ರಥಮ ಶ್ರೇಣಿಯಲ್ಲಿ ಪಾಸಾದ ವಿದ್ಯಾರ್ಥಿಗೆ "Prof. Gopal M. Advirao and Smt. Madhuri Gopal" ಇವರ ಹೆಸರಿನಲ್ಲಿ ಸ್ವರ್ಣ ಪದಕವನ್ನು ಸ್ಥಾಪನೆ ಮಾಡುವ ಪ್ರಸ್ತಾವನೆಯನ್ನು ಸಿಂಡಿಕೇಟ್ ಸಭೆಯಲ್ಲಿ ಅನುಮೋದಿಸುವ ಕುರಿತು.

******

2022-23ನೇ ಶೈಕ್ಷಣಿಕ ಸಾಲಿಗೆ ಅನ್ವಯವಾಗುವಂತೆ ಸ್ವರ್ಣ ಪದಕ ದೇಣಿಗೆ ನೀಡಿರುವ ದಾನಿಗಳ ವಿವರಗಳು ಈ ಕೆಳಗಿನಂತಿವೆ.

| Sl. No. | Name of the Donor | AmountDD /Ch.No./ Date | In the Name of | Subject which related to |
|---|---|---|---|---|
| 2 | **Dr. Premalatha S.J.,**<br>Associate Professor,<br>And 14 Research Scholars.<br>Dept. of Biochemistry. | **Rs.55,000/-**<br>DD No:146490<br>20.10.2022<br>**Rs.55,000/-**<br>DD No:146570<br>12.12.2022. | Prof. Gopal M. Advirao and Smt. Madhuri Gopal<br><br>**GOLD MEDAL** | 1. Scoring Highest Marks in Enzymology/Biocatalysis paper in M.Sc. Biochemistry.<br>2. If the Enzymology/ Biocatalysis paper is discontinued, the Gold Medal shall be provided to the 1st Rank Holder in M.Sc. Biochemistry |

ಮೇಲ್ಕಂಡ ಸ್ವರ್ಣ ಪದಕ ದಾನಿಗಳು ಹಾಗೂ ಸದರಿಯವರು ಆಯ್ಕೆ ಮಾಡಿಕೊಂಡಿರುವ ಸ್ವರ್ಣ ಪದಕ ದಾನದ ವಿಷಯದ ವಿವರಗಳನ್ನು ದಿನಾಂಕ:25.01.2023ರ ಸಿಂಡಿಕೇಟ್ ಅಸಾಮಾನ್ಯ ಸಭೆಯ ಅವಗಾಹನೆಗೆ ಹಾಗೂ ಅನುಮೋದನೆಗಾಗಿ ಸಲ್ಲಿಸಿದೆ.

## ನಿರ್ಣಯ

ದಾವಣಗೆರೆ ವಿಶ್ವವಿದ್ಯಾನಿಲಯದ ಜೀವರಸಾಯನ ಶಾಸ್ತ್ರ ಅಧ್ಯಯನ ವಿಭಾಗದ ಸ್ನಾತಕೋತ್ತರ ಪದವಿಯ M.Sc. Enzymology/ Biocatalysis ವಿಷಯದಲ್ಲಿ ಅತೀ ಹೆಚ್ಚು ಅಂಕ ಪಡೆದು ಪ್ರಥಮ ಶ್ರೇಣಿಯಲ್ಲಿ ಪಾಸಾದ ವಿದ್ಯಾರ್ಥಿಗೆ "Prof. Gopal M. Advirao and Smt. Madhuri Gopal" ಇವರ ಹೆಸರಿನಲ್ಲಿ ಸ್ವರ್ಣ ಪದಕವನ್ನು ಸ್ಥಾಪನೆ ಮಾಡಲು ಸಭೆಯು ಒಮ್ಮತದಿಂದ ಅನುಮೋದನೆ ನೀಡಿತು.

ಕುಲಸಚಿವರು

ಕುಲಪತಿಗಳು
ದಾವಣಗೆರೆ ವಿಶ್ವವಿದ್ಯಾನಿಲಯ

| ಅಭಿವೃದ್ಧಿ ವಿಭಾಗ | |
|---|---|
| ವಿಷಯ ಸಂಖ್ಯೆ: | ಸಿಂ.05(a)/(01/23) |

# -: ಟಿಪ್ಪಣಿ :-

**ವಿಷಯ:** ವಿಶ್ವವಿದ್ಯಾನಿಲಯದ ಲೇಖನಾ ಸಾಮಾಗ್ರಿ ಹಾಗೂ ಸ್ವಚ್ಛತಾ ಸಾಮಾಗ್ರಿ ಟೆಂಡರ್‌ನಲ್ಲಿ M/S RSP Enterprises ಇವರು ಆಯ್ಕೆಯಾಗಿರುವ ಬಗ್ಗೆ.

ಉಲ್ಲೇಖ: ಮಾನ್ಯ ಕುಲಪತಿಗಳ ನಿರ್ದೇಶನ ದಿನಾಂಕ:18.01.2023

*********

ವಿಶ್ವವಿದ್ಯಾನಿಲಯದ ಆಡಳಿತ ವಿಭಾಗದ ಕಛೇರಿಗಳಿಗೆ, ವಿವಿಧ ಸ್ನಾತಕೋತ್ತರ ಅಧ್ಯಯನ ವಿಭಾಗಗಳಿಗೆ ಹಾಗೂ ಸ್ನಾತಕಕೋತ್ತರ ಕೇಂದ್ರ ಚಿತ್ರದುರ್ಗ ಹಾಗೂ ದೃಶ್ಯಕಲಾ ಮಹಾವಿದ್ಯಾಲಯಕ್ಕೆ ಅವಶ್ಯಕವಿರುವ ಲೇಖನಾ ಸಾಮಾಗ್ರಿ ಮತ್ತು ಸ್ವಚ್ಛತಾ ಸಾಮಾಗ್ರಿ ಖರೀದಿ ಒಟ್ಟು ರೂ.20,00,000/-ಗಳಿಗೆ ಟೆಂಡರ್ ಅಹ್ವಾನಿಸಲಾಗಿತ್ತು. ಅದರಲ್ಲಿ ತಾಂತ್ರಿಕ ಬಿಡ್ ಹಾಗೂ ಹಣಕಾಸು ಬಿಡ್ ಸಮಿತಿಯ ಅನುಮೋದನೆಯಲ್ಲಿ M/S RSP Enterprises ಇವರನ್ನು ಆಯ್ಕೆ ಮಾಡಲಾಗಿದೆ. ಈ ಸಂಬಂಧ ದಿನಾಂಕ:25.01.2023ರ ಸಿಂಡಿಕೇಟ್ ಅಸಾಮಾನ್ಯ ಸಭೆಗೆ ಅವಗಾಹನೆಗೆ ಹಾಗೂ ಅನುಮೋದನೆಗಾಗಿ ಸಲ್ಲಿಸಲಾಗಿದೆ.

## ನಿರ್ಣಯ

ವಿಶ್ವವಿದ್ಯಾನಿಲಯದ ಆಡಳಿತ ವಿಭಾಗದ ಕಛೇರಿಗಳಿಗೆ, ವಿವಿಧ ಸ್ನಾತಕೋತ್ತರ ಅಧ್ಯಯನ ವಿಭಾಗಗಳಿಗೆ ಹಾಗೂ ಸ್ನಾತಕಕೋತ್ತರ ಕೇಂದ್ರ, ಚಿತ್ರದುರ್ಗ ಹಾಗೂ ದೃಶ್ಯಕಲಾ ಮಹಾವಿದ್ಯಾಲಯಕ್ಕೆ ಅವಶ್ಯಕವಿರುವ ಲೇಖನಾ ಸಾಮಾಗ್ರಿ ಮತ್ತು ಸ್ವಚ್ಛತಾ ಸಾಮಾಗ್ರಿ ಖರೀದಿ ಮೊತ್ತ ಒಟ್ಟು ರೂ.20,00,000/-ಗಳಿಗೆ ತಾಂತ್ರಿಕ ಬಿಡ್ ಹಾಗೂ ಹಣಕಾಸು ಬಿಡ್ ಸಮಿತಿಯ ಅನುಮೋದನೆಯಲ್ಲಿ M/S RSP Enterprises ಇವರನ್ನು ಆಯ್ಕೆ ಮಾಡಿರುವುದನ್ನು ಸಭೆಯು ಪರಿಶೀಲಿಸಿ ಒಮ್ಮತದಿಂದ ಅನುಮೋದನೆ ನೀಡಿತು.

ಕುಲಸಚಿವರು

ಕುಲಪತಿಗಳು
ದಾವಣಗೆರೆ ವಿಶ್ವವಿದ್ಯಾನಿಲಯ

| ಕಾಲೇಜು ಅಭಿವೃದ್ಧಿ ಪರಿಷತ್ | |
|---|---|
| ವಿಷಯ ಸಂಖ್ಯೆ: | ಸಿಂ.06(a)/(01/23) |

## –: ಟಿಪ್ಪಣಿ :–

**ವಿಷಯ:** 2022–23ನೇ ಶೈಕ್ಷಣಿಕ ಸಾಲಿನಲ್ಲಿ ವಿಶ್ವವಿದ್ಯಾನಿಲಯದ ವ್ಯಾಪ್ತಿಯಲ್ಲಿ ಬರುವ ಕಾಲೇಜುಗಳಿಗೆ ಹೆಚ್ಚುವರಿ ಪ್ರವೇಶಕ್ಕೆ ಅನುಮತಿ ನೀಡಿರುವ ಬಗ್ಗೆ.

**ಉಲ್ಲೇಖ:** 1. ವಿವಿ ಪತ್ರ ಸಂ: ದಾವಿವಿ/ಪ್ರಾಧಿಕಾರ/ಸಿಂ/290/2022–23/4182, ದಿನಾಂಕ:18.01.2023.

2. ಮಾನ್ಯ ಕುಲಪತಿಗಳವರ ಅನುಮೋದನೆ ದಿನಾಂಕ:19.01.2023.

ವಿಶ್ವವಿದ್ಯಾನಿಲಯದ ಸಂಲಗ್ನಗೊಂಡ ಕಾಲೇಜುಗಳಲ್ಲಿ 2022–23ನೇ ಶೈಕ್ಷಣಿಕ ಸಾಲಿನಲ್ಲಿ ವಿವಿಧ ಸ್ನಾತಕ ಪದವಿ ಕೋರ್ಸುಗಳ ಪ್ರವೇಶಾತಿಗೆ ವಿದ್ಯಾರ್ಥಿಗಳ ಸ್ಪರ್ಧೆಯ ಹೆಚ್ಚಳದಿಂದಾಗಿ ಆಯಾ ಕಾಲೇಜುಗಳ ಪ್ರಾಂಶುಪಾಲರುಗಳು ತಮ್ಮ ಕಾಲೇಜಿನಲ್ಲಿ ಬೋಧಿಸುತ್ತಿರುವ ಸ್ನಾತಕ ಪದವಿಗಳ ಹೆಚ್ಚುವರಿ ಪ್ರವೇಶಕ್ಕೆ ಅನುಮತಿ ಕೋರಿಕೆಗಳನ್ನು ಸಲ್ಲಿಸಿದ್ದರ ಹಿನ್ನೆಲೆಯಲ್ಲಿ ಹಾಗೂ ವಿದ್ಯಾರ್ಥಿಗಳ ಶೈಕ್ಷಣಿಕ ಹಿತದೃಷ್ಟಿಯಿಂದ 2022–23ನೇ ಶೈಕ್ಷಣಿಕ ಸಾಲಿನಲ್ಲಿ ಹೆಚ್ಚುವರಿ ಪ್ರವೇಶಾತಿಗೆ ಅನುಮತಿ ನೀಡಲಾಗಿದೆ(ಅನುಬಂಧ–1).

ಮಾನ್ಯ ಕುಲಪತಿಗಳ ಅನುಮೋದನೆ ಮೇರೆಗೆ, ವಿಶ್ವವಿದ್ಯಾನಿಲಯದಿಂದ ಕೈಗೊಂಡ ಕ್ರಮವನ್ನು ದಿನಾಂಕ:25.01.2023ರಂದು ಏರ್ಪಡಿಸಲಾಗಿರುವ ಸಿಂಡಿಕೇಟ್ ಅಸಾಮಾನ್ಯ ಸಭೆಯ ಅವಗಾಹನೆಗಾಗಿ ಹಾಗೂ ಸ್ಥಿರೀಕರಣಕ್ಕಾಗಿ ಸಲ್ಲಿಸಿದೆ.

### ನಿರ್ಣಯ

ವಿಶ್ವವಿದ್ಯಾನಿಲಯದ ಸಂಲಗ್ನಗೊಂಡ ಕಾಲೇಜುಗಳಲ್ಲಿ 2022–23ನೇ ಶೈಕ್ಷಣಿಕ ಸಾಲಿನಲ್ಲಿ ವಿವಿಧ ಸ್ನಾತಕ ಪದವಿ ಕೋರ್ಸುಗಳ ಪ್ರವೇಶಾತಿಗೆ ವಿದ್ಯಾರ್ಥಿಗಳ ಸ್ಪರ್ಧೆಯ ಹೆಚ್ಚಳದಿಂದಾಗಿ ಆಯಾ ಕಾಲೇಜುಗಳ ಪ್ರಾಂಶುಪಾಲರುಗಳು ತಮ್ಮ ಕಾಲೇಜಿನಲ್ಲಿ ಬೋಧಿಸುತ್ತಿರುವ ಸ್ನಾತಕ ಪದವಿಗಳ ಹೆಚ್ಚುವರಿ ಪ್ರವೇಶಕ್ಕೆ ಅನುಮತಿ ಕೋರಿಕೆಗಳನ್ನು ಸಲ್ಲಿಸಿದ್ದರ ಹಿನ್ನೆಲೆಯಲ್ಲಿ ಹಾಗೂ ವಿದ್ಯಾರ್ಥಿಗಳ ಶೈಕ್ಷಣಿಕ ಹಿತದೃಷ್ಟಿಯಿಂದ 2022–23ನೇ ಶೈಕ್ಷಣಿಕ ಸಾಲಿನಲ್ಲಿ 13 ಕಾಲೇಜುಗಳಿಗೆ ಹೆಚ್ಚುವರಿ ಪ್ರವೇಶಾತಿ ನೀಡಿರುವುದನ್ನು ಸಭೆಯು ಚರ್ಚಿಸಿ ಒಮ್ಮತದಿಂದ ಅನುಮೋದನೆ ನೀಡಿತು.

ಕುಲಸಚಿವರು

ಕುಲಪತಿಗಳು
ದಾವಣಗೆರೆ ವಿಶ್ವವಿದ್ಯಾನಿಲಯ

## ಅನುಬಂಧ–01

## 2022–23ನೇ ಶೈಕ್ಷಣಿಕ ಸಾಲಿಗೆ ಹೆಚ್ಚುವರಿ ಪ್ರವೇಶಕ್ಕೆ ಅನುಮತಿ ನೀಡಲಾಗಿರುವ ಕಾಲೇಜುಗಳ ಮಾಹಿತಿ

| ಕ್ರ.ಸಂ | ಕಾಲೇಜಿನ ಹೆಸರು | ಪದವಿ | ಪ್ರಸ್ತುತ ಇರುವ ಪ್ರವೇಶ ಮಿತಿ | ನೀಡಲಾಗಿರುವ ಪ್ರವೇಶಮಿತಿ |
|---|---|---|---|---|
| 1 | ಇಂಟರ್‌ಫೇಸ್ ಕಾಲೇಜ್ ಆಫ್ ಕಂಪ್ಯೂಟರ್ ಅಪ್ಲಿಕೇಷನ್, ದಾವಣಗೆರೆ | ಬಿ.ಸಿ.ಎ | 60 | 03 |
| 2 | ಬಾಪೂಜಿ ಪ್ರಥಮ ದರ್ಜೆ ಕಾಲೇಜು, ಚಳ್ಳಕೆರೆ | ಬಿ.ಕಾಂ | 60 | 30 |
| 3 | ಶ್ರೀಮತಿ ಪಾರ್ವತಮ್ಮ ಶಾಮನೂರು ಶಿವಶಂಕರಪ್ಪ ಸ್ಕೂಲ್ ಆಫ್ ಹೈ–ಟೆಕ್ ಎಜುಕೇಷನ್, ದಾವಣಗೆರೆ | ಬಿ.ಸಿ.ಎ | 120 | 31 |
| 4 | ನೂತನ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್, ದಾವಣಗೆರೆ | ಬಿ.ಸಿ.ಎ | 120 | 30 |
| 5 | ದವನ್ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್ ಸ್ಟಡೀಸ್, ದಾವಣಗೆರೆ | ಬಿ.ಸಿ.ಎ | 60 | 15 |
| 6 | ಜಿ.ಎಂ.ಎಸ್. ಅಕಾಡೆಮಿ, ದಾವಣಗೆರೆ | ಬಿ.ಕಾಂ | 120 | 50 |
| | | ಬಿ.ಸಿ.ಎ | 90 | 20 |
| 7 | ಬಿ.ಎಸ್ ಚನ್ನಬಸಪ್ಪ ಪ್ರಥಮ ದರ್ಜೆ ಕಾಲೇಜು, ದಾವಣಗೆರೆ | ಬಿ.ಸಿ.ಎ | 120 | 30 |
| 8 | ಎಸ್.ಬಿ.ಸಿ ಪ್ರಥಮ ದರ್ಜೆ ಮಹಿಳಾ ಕಾಲೇಜು, ದಾವಣಗೆರೆ | ಬಿ.ಸಿ.ಎ | 60 | 15 |
| 9 | ಡಾ॥ ಸಿ. ವಿ. ರಾಮನ್ ಕಾಲೇಜ್ ಆಫ್ ಸಿಸ್ಟಂ ಅಡ್ಮಿನಿಸ್ಟ್ರೇಶನ್ ಅಂಡ್ ನೆಟ್‌ವರ್ಕ್ ಸೈನ್ಸಸ್, ದಾವಣಗೆರೆ | ಬಿ.ಸಿ.ಎ | 30 | 16 |
| 10 | ಬಿಟ್ಸ್ ಹೈ–ಟೆಕ್ ಕಾಲೇಜು, ಚಿತ್ರದುರ್ಗ | ಬಿ.ಸಿ.ಎ | 40 | 20 |
| 11 | ಅಜ್ಜಂಪುರ ಗೋವಿಂದಸ್ವಾಮಿ ಭಾಗ್ಯಲಕ್ಷ್ಮಮ್ಮ ಪ್ರಥಮ ದರ್ಜೆ ಕಾಲೇಜು, ದಾವಣಗೆರೆ | ಬಿ.ಕಾಂ | 60 | 36 |
| 12 | ಜೆ. ಹೆಚ್. ಪಟೇಲ್ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್ ಅಂಡ್ ಟೆಕ್ನಾಲಜಿ, ದಾವಣಗೆರೆ | ಬಿ.ಸಿ.ಎ | 50 | 35 |
| 13 | ಬಾಪೂಜಿ ಇನ್‌ಸ್ಟಿಟ್ಯೂಟ್ ಆಫ್ ಹೈಟೆಕ್ ಎಜುಕೇಷನ್, ದಾವಣಗೆರೆ | ಬಿ.ಸಿ.ಎ | 300 | 105 |

ಕುಲಸಚಿವರು

ಕುಲಪತಿಗಳು
ದಾವಣಗೆರೆ ವಿಶ್ವವಿದ್ಯಾನಿಲಯ

| ಕಾಲೇಜು ಅಭಿವೃದ್ಧಿ ಪರಿಷತ್ | |
|---|---|
| ವಿಷಯ ಸಂಖ್ಯೆ: | ಸಿಂ.06(b)/(01/23) |

## -ಃ ಟಿಪ್ಪಣಿ ಃ-

ವಿಷಯ: ವಿಶ್ವವಿದ್ಯಾನಿಲಯದ ವ್ಯಾಪ್ತಿಯಲ್ಲಿ ಬರುವ ಕಾಲೇಜುಗಳಿಗೆ 2022-23ನೇ ಸಾಲಿನಿಂದ ಶಾಶ್ವತ ಸಂಯೋಜನೆ ನವೀಕರಣ ಮಂಜೂರು ಮಾಡುವ ಕುರಿತು.

ಉಲ್ಲೇಖ: 1. ಸರ್ಕಾರದ ಸೂತ್ತೋಲೆ ಸಂಖ್ಯೆ: ಇಡಿ 24 ಯುಡಿವಿ 2016, ದಿನಾಂಕ:29.08.2016.
2. ಸರ್ಕಾರದ ಸೂತ್ತೋಲೆ ಸಂಖ್ಯೆ: ಇಡಿ 227 ಯುಆರ್‌ಸಿ 2017, ದಿನಾಂಕ:07.07.2017.
3. ಸರ್ಕಾರದ ಸೂತ್ತೋಲೆ ಸಂಖ್ಯೆ: ಇಡಿ 119 ಯುಆರ್‌ಸಿ 2021, ದಿನಾಂಕ:23.07.2021.
4. ಕಾಲೇಜಿನ ಪತ್ರ ಸಂಖ್ಯೆ:AVKC/Affiliation/2022-23, ದಿನಾಂಕ:14.12.2022
5. ಕಾಲೇಜಿನ ಪತ್ರ ಸಂಖ್ಯೆ:ಎಸ್‌ಬಿಸಿ/1791/2022-23, ದಿನಾಂಕ:06.12.2022.
6. ಕಾಲೇಜಿನ ಪತ್ರ ಸಂಖ್ಯೆ:ಎಸ್‌ಬಿಸಿ/1798/2022-23, ದಿನಾಂಕ:23.12.2022.
7. ಕಾಲೇಜಿನ ಪತ್ರ ಸಂಖ್ಯೆ:ಬಿಇಎ/228/2022-23, ದಿನಾಂಕ:05.12.2022.
8. ಕಾಲೇಜಿನ ಪತ್ರ ಸಂಖ್ಯೆ:ಎಂಎಂಸಿಇ/ಶಾಶ್ವತ ಸಂ/91/2022-23, ದಿನಾಂಕ:03.12.2022.
9. ಕಾಲೇಜಿನ ಪತ್ರ ಸಂಖ್ಯೆ:101/2021-22, ದಿನಾಂಕ:05.12.2022
10. ಕಾಲೇಜಿನ ಪತ್ರ ಸಂಖ್ಯೆ: ಎಆರ್‌ಜಿ/48/2022-23, ದಿನಾಂಕ:16.12.2022.
11. ಕಾಲೇಜಿನ ಪತ್ರ ಸಂಖ್ಯೆ:ಪ್ರಾ/ಬಿ.ಪ.ಕವಾ.ಕಾ/ಹೊ/109/2022-23, ದಿನಾಂಕ:21.12.2022.
12. ಕಾಲೇಜಿನ ಪತ್ರ ಸಂಖ್ಯೆ:ಸಪ್ರದಕಾದಾ/ಶೈವಿ/2022-23/995, ದಿನಾಂಕ:27.12.2022.

1) ವಿಶ್ವವಿದ್ಯಾನಿಲಯದ ವ್ಯಾಪ್ತಿಯಲ್ಲಿ ಬರುವ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಿಗೆ ಶಾಶ್ವತ ಸಂಯೋಜನೆಯನ್ನು ಮಂಜೂರು ಮಾಡಲು ನ್ಯಾಕ್‌ನಿಂದ ಪಡೆದ ಪ್ರಮಾಣ ಪತ್ರವನ್ನು ಆಧಾರವಾಗಿ ಪರಿಗಣಿಸಿ, ಎ-ಗ್ರೇಡ್ ನ್ಯಾಕ್ ಪ್ರಮಾಣ ಪತ್ರವನ್ನು ಪಡೆದ ಕಾಲೇಜುಗಳಿಗೆ 5 ವರ್ಷ, ಬಿ-ಗ್ರೇಡ್ ಪಡೆದಿದ್ದಲ್ಲಿ 4 ವರ್ಷ, ಮತ್ತು ಸಿ-ಗ್ರೇಡ್ ಪಡೆದಿದ್ದಲ್ಲಿ 3 ವರ್ಷಗಳ ಅವಧಿಗೆ ಶಾಶ್ವತ ಸಂಯೋಜನೆ ನೀಡಲು ಸರ್ಕಾರಕ್ಕೆ ಶಿಫಾರಸ್ಸು ಮಾಡುವಂತೆ ಹಾಗೂ ಅನುದಾನಿತ ಹಾಗೂ ಅನುದಾನ ರಹಿತ ಕಾಲೇಜುಗಳಿಗೆ ಶಾಶ್ವತ ಸಂಯೋಜನೆ ನೀಡುವ/ನವೀಕರಿಸುವ ಸಂಬಂಧ ಉಲ್ಲೇಖ(1)ರ ಮತ್ತು ಉಲ್ಲೇಖ(2)ರ ಸರ್ಕಾರದ ಸುತ್ತೋಲೆ ಪತ್ರಗಳಲ್ಲಿ ಸೂಚಿಸಲಾಗಿತ್ತು.

2) ಈ ಸಂಬಂಧವಾಗಿ, ಉಲ್ಲೇಖ(3)ರ ಪತ್ರದಲ್ಲಿ, ಸರ್ಕಾರದ ಅಧೀನ ಕಾರ್ಯದರ್ಶಿಗಳು, ಉನ್ನತ ಶಿಕ್ಷಣ ಇಲಾಖೆ, ಬೆಂಗಳೂರು- ಇವರು ವಿಶ್ವವಿದ್ಯಾನಿಲಯದ ಧನಸಹಾಯ ಆಯೋಗದ(ಯುಜಿಸಿ) ಸೂಚನೆಗಳನ್ವಯ, ಸಂಯೋಜಿತ ಕಾಲೇಜುಗಳ ಶಾಶ್ವತ ಸಂಯೋಜನೆ ನೀಡಲು ನ್ಯಾಕ್ ಪ್ರಮಾಣ ಪತ್ರದ ಅವಶ್ಯಕತೆ ಇಲ್ಲದಿರುವುದರಿಂದ ಉಲ್ಲೇಖ(1)ರ ಮತ್ತು ಉಲ್ಲೇಖ(2)ರ ಸರ್ಕಾರದ ಸುತ್ತೋಲೆ ಪತ್ರಗಳನ್ನು ಹಿಂಪಡೆದು, ಸರ್ಕಾರಿ ಕಾಲೇಜುಗಳು ಹಾಗೂ ಅನುದಾನಿತ ಮತ್ತು ಅನುದಾನ ರಹಿತ ಕಾಲೇಜುಗಳಿಗೆ ಹೊಸದಾಗಿ ಶಾಶ್ವತ ಸಂಯೋಜನೆಗೆ ನೀಡಲು/ನವೀಕರಿಸಲು ಬರುವ ಪ್ರಸ್ತಾವನೆಗಳನ್ನು ಆಯಾ ಕಾಲೇಜುಗಳು ಹೊಂದಿರುವ ಮೂಲಭೂತ ಸೌಕರ್ಯಗಳು ಹಾಗೂ ಉಲ್ಲೇಖ(3)ರ ಸರ್ಕಾರದ ಆದೇಶಾನುಸಾರ ಪರಿಶೀಲಿಸಿ ಸರ್ಕಾರಕ್ಕೆ ಶಿಫಾರಸ್ಸು ಮಾಡುವಂತೆ ತಿಳಿಸಲಾಗಿದೆ.

3) 2022-23ನೇ ಶೈಕ್ಷಣಿಕ ಸಾಲಿನಲ್ಲಿ ವಿಶ್ವವಿದ್ಯಾನಿಲಯದ ವ್ಯಾಪ್ತಿಯ ಸರ್ಕಾರಿ/ ಅನುದಾನಿತ/ ಅನುದಾನ ರಹಿತ ಕಾಲೇಜುಗಳ ಶಾಶ್ವತ ಸಂಯೋಜನೆಗೆ ಸಂಬಂಧಿಸಿದಂತೆ, ಸರ್ಕಾರದ ಆದೇಶ ಸಂಖ್ಯೆ: ಇಡಿ 29 ಯುಎನ್‌ಇ 2021, ದಿನಾಂಕ:12.02.2021ರಲ್ಲಿ ಮಾರ್ಗಸೂಚಿಗಳನ್ವಯ, ಆನ್‌ಲೈನ್ ಸಂಯೋಜನಾ ನಿಗಧಿತ ಅಂಕಗಳು ಬರದೇ ಇರುವ ಕಾಲೇಜುಗಳಿಗೆ ಹಾಗೂ ನ್ಯಾಕ್ ಮರು ಮಾನ್ಯತೆ ಹೊಂದದೇ ಇರುವ ಕಾಲೇಜುಗಳಿಗೆ ತಾತ್ಕಾಲಿಕವಾಗಿ ಮುಂದುವರಿಕೆ ಸಂಯೋಜನಾ ಜ್ಞಾಪನ ಪತ್ರವನ್ನು ನೀಡಲಾಗಿದೆ.

ಕುಲಪತಿಗಳು
ದಾವಣಗೆರೆ ವಿಶ್ವವಿದ್ಯಾನಿಲಯ

ಕುಲಸಚಿವರು

ತತ್ಸಂಬಂಧವಾಗಿ, 2022-23ನೇ ಶೈಕ್ಷಣಿಕ ಸಾಲಿನಲ್ಲಿ ಶಾಶ್ವತ ಸಂಯೋಜನೆ ನವೀಕರಣಕ್ಕಾಗಿ ಉಲ್ಲೇಖ(3) ರಿಂದ (10)ರವರೆಗಿನ ಪತ್ರಗಳಲ್ಲಿ ಹಾಗೂ ಮೌಖಿಕವಾಗಿ ಕಾಲೇಜುಗಳ ಪ್ರಾಂಶುಪಾಲರುಗಳು ಈ ಕೆಳಕಂಡಂತೆ ವಿಶ್ವವಿದ್ಯಾನಿಲಯಕ್ಕೆ ಮನವಿಯನ್ನು ಸಲ್ಲಿಸಿರುತ್ತಾರೆ.

- ನಮ್ಮ ಕಾಲೇಜು ಮೂಲಭೂತ ಸೌಕರ್ಯಗಳನ್ನು ಹೊಂದಿದ್ದು, ಆನ್‌ಲೈನ್ ತಂತ್ರಾಂಶದಲ್ಲಿ ಕೆಲವು ತಾಂತ್ರಿಕ ದೋಷಗಳಿಂದ ನಿಗಧಿತ ಅಂಕಗಳು ಬರೆದೆ ಇರುವುದರಿಂದ ನಮ್ಮ ಕಾಲೇಜುಗಳಿಗೆ ಶಾಶ್ವತ ಸಂಯೋಜನೆ ನವೀಕರಣವನ್ನು ಕೋರಿರುತ್ತಾರೆ.
- ಈಗಾಗಲೇ ನ್ಯಾಕ್ ಮರು ಮಾನ್ಯತೆ ಸಂಬಂಧ AQAR/PAR ಮಾಹಿತಿಯನ್ನು ಸಲ್ಲಿಸಲಾಗಿದ್ದು ನ್ಯಾಕ್ ಸಮಿತಿಯು ಭೇಟಿ ದಿನಾಂಕ ಸೂಚಿಸುವ ನಿರೀಕ್ಷೆಯಲ್ಲಿದ್ದೇವೆ.
- ಅನುದಾನಿತ ಬಿ.ಇಡಿ., ಕಾಲೇಜುಗಳಿಗೆ ನ್ಯಾಕ್ ಮರು ಮಾನ್ಯತೆ ಸಂಬಂಧ, AQAR ವರದಿಯನ್ನು ಸಲ್ಲಿಸಲಾಗಿದು ಅವಶ್ಯಕ ಕ್ರಮಕೈಗೊಂಡಿರುತ್ತೇವೆ.
- ಕೆಲವು ಕಾಲೇಜಿನವರು ಉಲ್ಲೇಖ(3)ರ ಪತ್ರವನ್ನು ಉಲ್ಲೇಖಿಸಿ ಶಾಶ್ವತ ಸಂಯೋಜನೆಗೆ NAAC ಮಾನ್ಯತೆಯ ಅಗತ್ಯತೆ ಇಲ್ಲದಿರುವುದರಿಂದ ಶಾಶ್ವತ ಸಂಯೋಜನೆಯನ್ನು ನವಿಕರಿಸಲು ಕೋರಿರುತ್ತಾರೆ.

ಈ ಮೇಲ್ಕಂಡ ಅಂಶಗಳನ್ನು ಪರಿಶೀಲಿಸಲಾಗಿ, ವಿಶ್ವವಿದ್ಯಾನಿಲಯದ ಸಂಲಗ್ನಗೊಂಡ ಕಾಲೇಜುಗಳ ಪ್ರಾಂಶುಪಾಲರುಗಳು 2022-23ನೇ ಶೈಕ್ಷಣಿಕ ಸಾಲಿನಲ್ಲಿ ಶಾಶ್ವತ ಸಂಯೋಜನೆ ನವೀಕರಣಕ್ಕಾಗಿ ನಿಗಧಿತ ಶುಲ್ಕ ಪಾವತಿ ನಿಯಾಮನುಸಾರ ಅರ್ಜಿ ಸಲ್ಲಿಸಿರುತ್ತಾರೆ. ವಿಶ್ವವಿದ್ಯಾನಿಲಯದ ಸ್ಥಳೀಯ ತಪಾಸಣಾ ಸಮಿತಿಯು ಕಾಲೇಜುಗಳ ತಪಾಸಣೆ ನಡೆಸಿ ಶಾಶ್ವತ ಸಂಯೋಜನೆಗೆ ಶಿಫಾರಸ್ಸು ಮಾಡಿರುತ್ತದೆ.

**ಅದುದರಿಂದ, ಈ ಕೆಳಕಂಡ ಅಂಶಗಳನ್ನು ಸಿಂಡಿಕೇಟ್ ಸಭೆಯ ನಿರ್ಣಯಕ್ಕಾಗಿ ಸಲ್ಲಿಸಲಾಗಿದೆ.**

1. 2022-23ನೇ ಶೈಕ್ಷಣಿಕ ಸಾಲಿನಿ ಸಂಯೋಜನೆ ಸಂಬಂಧ, ಶಾಶ್ವತ ಸಂಯೋಜನೆ ನವೀಕರಣಕ್ಕೆ ಅನುಬಂಧ-01ರಲ್ಲಿ ಪಟ್ಟಿ ಮಾಡಲಾಗಿರುವ ಕಾಲೇಜುಗಳವರು ವಿಶ್ವವಿದ್ಯಾನಿಲಯಕ್ಕೆ ಅರ್ಜಿಯನ್ನು ಸಲ್ಲಿಸಿರುತ್ತಾರೆ. ಆದರೆ, ನ್ಯಾಕ್ ಮರು ಮಾನ್ಯತೆ ಹೊಂದಿಲ್ಲದೆ ಇರುವ ಕಾರಣದಿಂದ ಅಂತಹ ಕಾಲೇಜುಗಳಿಗೆ ಷರತ್ತುಗಳನ್ನು ವಿಧಿಸಿ ಇದೊಂದು ಬಾರಿಯ ಕ್ರಮವಾಗಿ ಶಾಶ್ವತ ಸಂಯೋಜನೆ ನವೀಕರಣಕ್ಕೆ ಅನುಮತಿ ನೀಡುವ ಕುರಿತು.

2. 2022-23ನೇ ಶೈಕ್ಷಣಿಕ ಸಾಲಿನಲ್ಲಿ ಈಗಾಗಲೇ ಶಾಶ್ವತ ಸಂಯೋಜನೆಯ ನವೀಕರಣಕ್ಕೆ ಶುಲ್ಕವನ್ನು ಪಾವತಿಸಿ ಆನ್‌ಲೈನ್ ಸಂಯೋಜನಾ ಮಾನದಂಡಗಳನ್ವಯ ನಿಗಧಿತ ಅಂಕಗಳು ಬಂದಿಲ್ಲದೆ ಇರುವ ಕಾಲೇಜುಗಳಿಗೆ ತಾತ್ಕಾಲಿಕ ಮುಂದುವರಿಕೆ ಸಂಯೋಜನೆಯನ್ನು ನೀಡಿ, 2022-23ನೇ ಸಾಲಿನಲ್ಲಿ ಪಾವತಿಸಿರುವ ಶಾಶ್ವತ ಸಂಯೋಜನಾ ನವೀಕರಣ ಶುಲ್ಕವನ್ನು 2023-24ನೇ ಸಾಲಿನಲ್ಲಿ ಲೆಕ್ಕ ಹೊಂದಾಣಿಕೆ ಮಾಡಿಕೊಂಡು ನಿಯಮಾನುಸಾರ ವಿಶ್ವವಿದ್ಯಾನಿಲಯಕ್ಕೆ ಸಂಯೋಜನ ಅರ್ಜಿಯನ್ನು ಸಲ್ಲಿಸುವಂತೆ ಕಾಲೇಜಿನ ಪ್ರಾಂಶುಪಾಲರಿಗೆ ಪತ್ರ ಬರೆಯುವ ಕುರಿತು.

ಸದರಿ ವಿಷಯವನ್ನು ದಿನಾಂಕ:25.01.2023ರ ಸಿಂಡಿಕೇಟ್ ಅಸಾಮಾನ್ಯ ಸಭೆಯ ಅವಗಾಹನೆಗಾಗಿ ಹಾಗೂ ಸ್ಥಿರೀಕರಣಕ್ಕಾಗಿ ಸಲ್ಲಿಸಿದೆ.

**ನಿರ್ಣಯ**

| S.No | Name of The College | Programme | Online Score | Affiliation |
|---|---|---|---|---|
| **ನ್ಯಾಕ್ ಮರು ಮಾನ್ಯತೆ ಹೊಂದಿಲ್ಲದೆ ಇರುವ ಕಾಲೇಜುಗಳು** | | | | |
| 1 | Bapuji Education Association College of Education, Davangere | B.Ed | 88.4 | RPA |
| 2 | Makanur Malleshappa College of Education, Davangere | B.Ed | 85.55 | RPA |

ಕುಲಸಚಿವರು

ಕುಲಪತಿಗಳು
ದಾವಣಗೆರೆ ವಿಶ್ವವಿದ್ಯಾನಿಲಯ

| | | | | |
|---|---|---|---|---|
| 3 | S.B.C. First Grade College for Women, Davangere | UG/PG | 72.63 | ETA/RPA |
| 4 | Srishaila College of Education, Harihara | B.Ed | 71.71 | RPA |
| 5 | Maganur Sarvamangalamma Basappa Arts & Commerce College, Davangere | UG | 68.75 | RPA |
| 6 | A.V. Kamalamma College for Women, Davangere | UG | 67.85 | ETA/RPA |
| 7 | Government Arts College(Autonomous), Chitradurga | UG/PG | 67.29 | ETA/RPA |
| 8 | B. Parameshwarappa Arts and Commerce College, Holalkere, | UG | 67.14 | RPA |
| 9 | HPPC Government First Grade College, Challakere. | UG/PG | 64.95 | ETA/RPA |
| 10 | Government First Grade College, Parushurampura. | UG | 64.71 | RPA |
| 11 | A R G Arts and Commerce College, Davangere | UG/PG | 62.04 | ETA/EPA |
| 12 | Government Science College, Chitradurga. | UG/PG | 61.17 | ETA/RPA |
| 13 | Maharaja Madakari Nayaka First Grade Arts & Commerce College, Chitradurga | UG | 59.52 | ETA/RPA |
| 14 | Sri Jagadguru Murugharajendra Arts,Science and Commerce College, Chitradurga. | UG | 59.51 | RPA |
| **ಆನ್‌ಲೈನ್ ಸಂಯೋಜನೆಯ ನಿಗಧಿತ ಅಂಕಗಳು ಬಂದಿಲ್ಲದೆ ಇರುವ ಕಾಲೇಜುಗಳು** | | | | |
| 15 | Government First Grade College, Davangere | UG/PG | 52.96 | ETA/RPA |
| 16 | Government First Grade College, Santebennur | UG | 52.87 | ETA/RPA |
| 17 | Vani Sakkare Government First Grade College, Hiryuru. | UG | 51.36 | RPA |
| 18 | Government First Grade College, Holalkere | UG | 50.08 | ETA/RPA |
| 19 | Government First Grade College, Molakalmuru | UG | 47.08 | RPA |
| 20 | Government First Grade College, Harihara | UG | 45.79 | ETA/RPA |
| 21 | Government First Grade College, Hosadurga. | UG/PG | 44.48 | ETA/RPA |
| 22 | Smt. Giriyamma R. Kanthappa Shresti First Grade Women's College, Harihar | UG | 44.29 | RPA |

ವಿಶ್ವವಿದ್ಯಾನಿಲಯದ ವ್ಯಾಪ್ತಿಯಲ್ಲಿ ಬರುವ ಈ ಮೇಲ್ಕಂಡ 22 ಕಾಲೇಜುಗಳಿಗೆ 2022-23ನೇ ಸಾಲಿನಿಂದ ಶಾಶ್ವತ ಸಂಯೋಜನೆ ನವೀಕರಣ ಮಂಜೂರಾತಿಗಾಗಿ ಸರ್ಕಾರಕ್ಕೆ ಪತ್ರಿಸಲು ಸಭೆಯು ಸ್ಥಿರೀಕರಿಸಿ ಒಮ್ಮತದಿಂದ ಅನುಮೋದಿಸಿತು.

ಕುಲಸಚಿವರು

ಕುಲಪತಿಗಳು
ದಾವಣಗೆರೆ ವಿಶ್ವವಿದ್ಯಾನಿಲಯ

| ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ | |
|---|---|
| ವಿಷಯ ಸಂಖ್ಯೆ: | ಸಿಂ.07(a)/(01/23) |

## -ಃ ಟಿಪ್ಪಣಿ ಃ-

**ವಿಷಯ:** ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ವಿದ್ಯಾರ್ಥಿ ಅಭಿವೃದ್ಧಿ ಘಟಕದ ಸಲಹಾ ಸಮಿತಿ ಸಭೆಯ ನಡಾವಳಿಗಳನ್ನು ಅನುಮೋದನೆಗೆ ಸಲ್ಲಿಸುತ್ತಿರುವ ಕುರಿತು.

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, 2022-23ನೇ ಶೈಕ್ಷಣಿಕ ಸಾಲಿನ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ವಿದ್ಯಾರ್ಥಿ ಅಭಿವೃದ್ಧಿ ಘಟಕದ ಸಲಹಾ ಸಮಿತಿಯ ಸಭೆಯನ್ನು ದಿನಾಂಕ:17.01.2023ರಂದು ಬೆಳಗ್ಗೆ 11.30 ಗಂಟೆಗೆ ವಿಶ್ವವಿದ್ಯಾನಿಲಯದ ಸಿಂಡಿಕೇಟ್ ಸಭಾಂಗಣದಲ್ಲಿ ಜರುಗಿಸಲಾಗಿತ್ತು. ಸದರಿ ಸಭೆಯಲ್ಲಿ 2022-23ನೇ ಶೈಕ್ಷಣಿಕ ಸಾಲಿನ ಪೂರ್ಣಕಾಲಿಕ ಪಿ.ಹೆಚ್.ಡಿ ಸಂಶೋಧಾನಾರ್ಥಿಗಳಿಗೆ ಶಿಷ್ಯವೇತನ ಹಂಚಿಕೆಯ ಬಗ್ಗೆ ಚರ್ಚಿಸಿ ತೀರ್ಮಾನಿಸಲಾಯಿತು. ಈ ಸಭೆಯ ನಡಾವಳಿಗಳನ್ನು ದಿನಾಂಕ:25.01.2023ರ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗೆ ಹಾಗೂ ಅನುಮೋದನೆಗಾಗಿ ಸಲ್ಲಿಸಲಾಗಿದೆ.

### ನಿರ್ಣಯ

ವಿಶ್ವವಿದ್ಯಾನಿಲಯದ ಸಿಂಡಿಕೇಟ್ ಸಭಾಂಗಣದಲ್ಲಿ ದಿನಾಂಕ:17.01.2023ರಂದು ಜರುಗಿಸಲಾದ 2022-23ನೇ ಶೈಕ್ಷಣಿಕ ಸಾಲಿನಲ್ಲಿ ಒಟ್ಟು 55 ಪಿ.ಹೆಚ್.ಡಿ. ಸಂಶೋಧನಾರ್ಥಿಗಳಿದ್ದು ಕಡಿಮೆ ಅನುದಾನವು ಬಿಡುಗಡೆಯಾಗಿರುವುದರಿಂದ ಮಾಹೆಯಾನ 10,000/- ದಂತೆ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಸಂಶೋಧನಾರ್ಥಿಗಳಿಗೆ ಪಾವತಿಸಲು ಸಲಹಾ ಸಮಿತಿ ಸಭೆಯಲ್ಲಿ ನಿರ್ಣಯಿಸಲಾದ ನಡಾವಳಿಗಳನ್ನು ಪರಿಶೀಲಿಸಿ ಚರ್ಚಿಸಿದ ನಂತರ ಒಮ್ಮತದಿಂದ ಸಭೆಯು ಅನುಮೋದಿಸಿತು.

ಕೊನೆಯಲ್ಲಿ ಮಾನ್ಯ ಕುಲಸಚಿವರ ವಂದನಾರ್ಪಣೆಯೊಂದಿಗೆ ಸಭೆಯು ಮುಕ್ತಾಯಗೊಂಡಿತು.

ಕುಲಸಚಿವರು

ಕುಲಪತಿಗಳು